# ಸರ್ವೇಷ್ಟಸಿದ್ಧಿ

(ಎಲ್ಲಾ ಕೋರಿಕೆಗಳೂ ನೆರವೇರುವ ಬಗೆ)

ಬರೆದವರು

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

ದೂ : 08175-73820

1996

ವಿಷಯಾನುಕ್ರಮಣಿಕೆ

ಅಧ್ಯಾತ್ಮ ಗ್ರಂಥಾವಳಿ

# ಸರ್ವೇಷ್ಟಸಿದ್ಧಿ

(ಎಲ್ಲಾ ಕೋರಿಕೆಗಳೂ ನೆರವೇರುವ ಬಗೆ)

ಬರೆದವರು :

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೨೯

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

ದೂ : 08175-73820

1996

# ಬಿನ್ನಹ

ವೇದಾಂತವಿಚಾರವನ್ನು ಪ್ರಪ್ರಥಮವಾಗಿ ಪ್ರಾರಂಭಿಸುವವರಿಗಾಗಿ ಬ್ರಹ್ಮೀಭೂತ ಶ್ರೀಶ್ರೀಗಳವರು ರಚಿಸಿರುವ ಈ ಚಿಕ್ಕ ಪುಸ್ತಕವನ್ನು ಐದನೆಯ ಬಾರಿಗೆ ಪ್ರಕಟಿಸಿದೆ. ಹಿಂದಿನ ಸಂಸ್ಕರಣಗಳ ಪ್ರತಿಗಳೆಲ್ಲವೂ ಮಾರಾಟವಾಗಿಬಿಟ್ಟಿದ್ದರಿಂದ ಓದುಗರಿಗೆ ಸುಲಭಶೈಲಿಯ ಗ್ರಂಥಗಳ ಕೊರತೆಯಾಗಬಾರದೆಂತ ಮತ್ತೆ ಈ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಾತ್ಮವಿದ್ಯೆಯನ್ನು ಕುರಿತು ಚಿಂತನೆಮಾಡುವ ಜಿಜ್ಞಾಸುಗಳಿಗೆ ಇಲ್ಲಿ ಕೆಲವು ವಿಷಯಗಳು ದೊರಕುತ್ತವೆ. ಅವುಗಳಿಗೆಲ್ಲ ಉಪನಿಷತ್ತುಗಳ ಆಧಾರವನ್ನು ಕೊಡಲಾಗಿದೆ. ಯಾವ ಮತಧರ್ಮದವರಾದರೂ ಸರಿ, ಈ ಗ್ರಂಥದಲ್ಲಿರುವ ಸರ್ವಸಮ್ಮತವಾದ ವಿಷಯಗಳನ್ನು ಮನನಮಾಡಿ ಶಾಂತಿಸುಖಗಳ ಹಾದಿಯನ್ನು ಕಂಡುಕೊಳ್ಳಬಹುದು.

ದಾವಣಗೆರೆನಗರದಲ್ಲಿರುವ ಮೆ।। ನಲ್ಲೂರ್ ವಿಶ್ವಾಸ್ ಜ್ಯೂಯಲರ್ಸ್ ಮಾಲೀಕರಾದ ಶ್ರೀ ನಲ್ಲೂರು ಪಾಂಡುರಂಗ ಎನ್. ರೇವಣಕರ - ಇವರು ಈ ಪುಸ್ತಕವನ್ನು ಓದಿ ಪ್ರಭಾವಿತರಾಗಿ ಮಹಾಜನರಲ್ಲಿ ಈ ಗ್ರಂಥವನ್ನು ಪ್ರಚಾರಮಾಡುವ ದೃಷ್ಟಿಯಿಂದ ಈ ಗ್ರಂಥದ ಪ್ರಕಟಣೆಗೆ ಎರಡು ಸಾವಿರ ರೂಪಾಯಿಗಳ ಧನಸಹಾಯವನ್ನು ನೀಡಿ ಪ್ರೋತ್ಸಾಹಿಸಿರುತ್ತಾರೆ. ಈ ಮಹಾಶಯರು ಇನ್ನೂ ಕೆಲವು ಅಧ್ಯಾತ್ಮಿಕ ಗ್ರಂಥಗಳನ್ನು ಇದೇ ರೀತಿಯಾಗಿ ಪ್ರಕಟಿಸಿ ಅಧ್ಯಾತ್ಮಜಿಜ್ಞಾಸುಗಳಲ್ಲಿ ಉಚಿತವಾಗಿ ಹಂಚಿರುತ್ತಾರೆ. ಈ ಮಹಾಶಯರಿಗೆ ಭಗವಂತನೂ, ಸದ್ಗುರುಗಳೂ ಸಕಲ ಸನ್ಮಂಗಳ ಪರಂಪರೆಗಳನ್ನೂ ದಯಪಾಲಿಸಲೆಂದು ಹಾರೈಸುತ್ತೇವೆ.

ಕಾರ್ಯಾಲಯವು ಕೈಗೊಂಡಿರುವ ಅಧ್ಯಾತ್ಮವಿದ್ಯಾಪ್ರಚಾರದ ನಾನಾ ಮುಖವಾದ ಇಂಥ ಪ್ರಯತ್ನಗಳಿಗೆ ಮಹಾಜನರು ತಮ್ಮ ಉದಾರಹಸ್ತಾವಲಂಬನೆಯನ್ನು ನೀಡಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಹೊಳೆನರಸೀಪುರ — ಇತಿ - ಸಜ್ಜನವಿಧೇಯ,

ತಾ. 23-8-1996 — ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

(ಶ್ರೀವರಮಹಾಲಕ್ಷ್ಮಿವ್ರತ) — ಅಧ್ಯಾತ್ಮಗ್ರಂಥಾವಳಿಯ ಸಂಪಾದಕ

# ವಿಷಯಾನುಕ್ರಮಣಿಕೆ


೧. ಕೋರಿಕೆಗಳು ಎಷ್ಟು ?

೨. ಕೋರಿಕೆಗಳಿಗೆ ಗುರಿ

೩. ಸೌಖ್ಯದ ದಾರಿಯಲ್ಲಿ ಕವಲುಗಳು

೪. ಸೌಖ್ಯದ ಹೆದ್ದಾರಿ

೫. ತೃಪ್ತಿಯ ಮರ್ಮ

೬. ಶಾಂತಿದಾಯಕವಾದ ಜ್ಞಾನ

೭. ಉಪಸಂಹಾರ

# ಪೀಠಿಕೆ

ಈ ಪುಸ್ತಕದಲ್ಲಿ ಅಧ್ಯಾತ್ಮವಿದ್ಯೆಯೆಂಬ ಆನಂದಶಾಸ್ತ್ರವನ್ನು ಚಿಂತನೆ ಮಾಡಬೇಕೆನ್ನುವವರಿಗೆ ಅನೇಕ ಸೂಚನೆಗಳಿವೆ. ಆನಂದವು ನಮ್ಮೊಳಗೇ ಇದ್ದು ನಮ್ಮ ನಿತ್ಯರೂಪನಾದ ಆತ್ಮನಿಗೇ ಸೇರಿದ್ದಾಗಿದ್ದರೂ ನಾವುಗಳು ಕೆಲವು ಕಾರಣಗಳಿಂದ ಅದರಿಂದ ವಂಚಿತರಾಗಿರುತ್ತೇವೆ. ನಾವು ದುಃಖಿತ ರಾಗಿದ್ದರೆ ಅದಕ್ಕೆ ಕಾರಣವು ನಮ್ಮ ಜೀವನಕ್ರಮದಲ್ಲಿಯೇ ಇದೆ ; ನಮ್ಮ ಮನಸ್ಸಿನ ವೈಷಮ್ಯವೇ ಅದಕ್ಕೆ ಕಾರಣವಾಗಿರುತ್ತದೆ. ಶರೀರದ ಧಾತು ವೈಷಮ್ಯದಿಂದ ಅನಾರೋಗ್ಯವುಂಟಾದರೆ ಆಪ್ತನಾದ ವೈದ್ಯನೊಬ್ಬನ ಉಪದೇಶವನ್ನು ಪಡೆದು ಆತನ ಮಾತಿನಂತೆ ಪಥ್ಯದಿಂದ ನಡೆದುಕೊಂಡು ಆರೋಗ್ಯವನ್ನು ಸಂಪಾದಿಸಿಕೊಳ್ಳುತ್ತೇವಲ್ಲವೆ ? ಅದರಂತೆಯೇ ನಮ್ಮ ಮನಸ್ಸಿನಲ್ಲಿ ಅನಾರೋಗ್ಯವುಂಟಾದರೆ ಮನಸ್ಸಿನ ವ್ಯಾಪಾರಗಳನ್ನು ಬಲ್ಲ ವೈದ್ಯನೊಬ್ಬನ ಉಪದೇಶವನ್ನು ಪಡೆದು ಆತನ ಹೇಳಿಕೆಯಂತೆ ನಮ್ಮ ಸ್ಸಿಗೆ ಪಥ್ಯವಾದ ಆಹಾರವನ್ನು ಕೊಡುವದು ಯುಕ್ತವಾಗಿದೆ. ಆಹಾರವು ಶುದ್ಧಿಯಾದರೆ ಅಂತಃಕರಣವೂ ಶುದ್ಧಿಯಾಗುವದು. ಅಂತಃಕರಣವು ಶುದ್ಧಿಯಾದರೆ ನಮ್ಮದೇ ಆಗಿರುವ ಆನಂದದ ನೆನಪು ನಮಗೆ ಬರುವದು - ಎಂದು ಉಪನಿಷತ್ತುಗಳು ಸಾರುತ್ತಿರುವವು.

ಈ ಪುಸ್ತಕದಲ್ಲಿ ಕೊಟ್ಟಿರುವ ಸೂಚನೆಗಳನ್ನನುಸರಿಸುವದರಿಂದ ಓದುಗರಿಗೆ ತಮ್ಮ ಸ್ವರೂಪವೇ ಆದ ಆನಂದವನ್ನು ಕಂಡುಕೊಳ್ಳುವದಕ್ಕೆ ಸ್ವಲ್ಪವಾದರೂ ಸಹಾಯವಾದೀತೆಂದು ನನಗೆ ದೃಢವಾದ ನಂಬಿಕೆ ಇದೆ.

ಗ್ರಂಥಕರ್ತರು.

|| ಓಮ್ ||

# ಸರ್ವೇಷ್ಟಸಿದ್ಧಿ

(ಎಲ್ಲಾ ಕೋರಿಕೆಗಳೂ ನೆರವೇರುವ ಬಗೆ)

## ೧. ಕೋರಿಕೆಗಳು ಎಷ್ಟು ?

**ಕಾಮಸ್ಯಾಪ್ತಿಂ ಜಗತಃ ಪ್ರತಿಷ್ಠಾಂ ಕ್ರತೋರಾನನ್ತ್ಯಮಭಯಸ್ಯ ಪಾರಮ್ ।**
**ಸ್ತೋಮಮಹದುರುಗಾಯಂ ಪ್ರತಿಷ್ಠಾಂ ದೃಷ್ಟ್ವಾ ಧೃತ್ಯಾ ಧೀರೋ**
**ನಚಿಕೇತೋಽತ್ಯಸ್ರಾಕ್ಷೀಃ ॥***

**- ಕಠ ೧-೨-೧೧**

"ಮನುಷ್ಯನಿಗಿರುವ ಕೋರಿಕೆಗಳು ಎಷ್ಟು ?" ಈ ಪ್ರಶ್ನೆಗೆ ಉತ್ತರವನ್ನು ಹೇಳುವದು ಸುಲಭವಲ್ಲ. ಈ ಲೋಕದಲ್ಲಿ ಎಷ್ಟು ಜನರಿದಾರೆಯೋ ಅದೇ ನಮಗೆ ಸರಿಯಾಗಿ ತಿಳಿಯದು. ಒಬ್ಬೊಬ್ಬರಿಗೂ ಇರುವ ಕೋರಿಕೆಗಳೋ, ಅನಂತವಾಗಿವೆ. ಅನ್ನ, ಬಟ್ಟೆ, ಹಣ, ಹೆಂಡತಿ, ಮಕ್ಕಳು, ಮನೆ, ದನ, ಹೊಲ, ಆಳುಕಾಳುಗಳು, ಅಧಿಕಾರ, ಒಳ್ಳೆಯ ಹೆಸರು, ಬುದ್ಧಿ, ಸಿದ್ಧಿ - ಹೀಗೆ ಪಟ್ಟಿಯನ್ನು ಬೆಳೆಯಿಸುತ್ತಾ ಹೋದರೆ ,ಎಷ್ಟು ಕೋರಿಕೆಗಳಾಗುವುವು ! ಇವುಗಳಲ್ಲಿ ಒಂದೊಂದರಲ್ಲಿಯೂ ಇರುವ ಒಳವಿಭಾಗಗಳನ್ನಾದರೂ ಇಷ್ಟೇ ಎಂದು ಯಾರಾದರೂ ಗೊತ್ತುಪಡಿಸಿ ಹೇಳಬಲ್ಲರೆ ?

ಉದಾಹರಣೆಗೆ ಅನ್ನವೆಂದರೆ ಹಸಿವಡಗುವಷ್ಟು ಆಹಾರವೆಂದು ಎಲ್ಲಿಯೋ ಕೆಲವು ಜನರ ಅಭಿಪ್ರಾಯವಿರಬಹುದು. ಆದರೆ ಮಿಕ್ಕವರಿಗೆ ಹಾಗಲ್ಲ. ಅವರಿಗೆ ಭಕ್ಷ್ಯಭೋಜ್ಯಗಳಾಗಬೇಕು, ಹಣ್ಣು ಹಂಪಲುಗಳಾಗಬೇಕು, ಬಗೆಬಗೆಯ ಪಾನೀಯಗಳಾಗಬೇಕು. ಇವೆಲ್ಲವೂ ಇದ್ದರೆ, ಇವೆಲ್ಲವೂ

---

* ಕಾಮಗಳ ಕೊನೆ, ಜಗತ್ತಿನ ಆಸರೆ, ಉಪಾಸನೆಯ ಕೊನೆಗಾಣುವ ಫಲ, ಅಭಯದ ಆಚೆಯ ದಡ, ಶ್ಲಾಘ್ಯವಾದ ಹೆಚ್ಚಿನ ಪರಮಗತಿ, ಅತ್ಯುತ್ತಮ ಸ್ಥಿತಿ. ಇದೆಲ್ಲವನ್ನೂ ನೋಡಿ, ಎಲೈ ಧೀರನಾದ ನಚಿಕೇತನೆ ಧೈರ್ಯದಿಂದ ಕೈಬಿಟ್ಟಿರುವೆಯಲ್ಲ !

ಸರಿಯಾಗಿದ್ದರೇ ಅವರಿಗೆ ನಿಜವಾಗಿ ಅನ್ನವಿದ್ದಂತೆ. ಇದಿರಲಿ. ಯಾವ ಯಾವ ರುಚಿಗಳು ಯಾವ ಯಾವ ಪರಿಮಾಣದಲ್ಲಿ ಸೇರಿದ್ದರೆ ಸವಿಯೂಟವಾಯಿ ತೆಂಬುದನ್ನು ಯಾರು ನಿರ್ಣಯಿಸುವವರು ? ಪಾಕಶಾಸ್ತ್ರಗಳ ಹಾಳೆಗಳನ್ನೆಲ್ಲ ಎಷ್ಟುಸಲ ಮಗುಚಿಹಾಕಿದರೂ ಇದರ ನಿಜವು ನಿರ್ಧಾರವಾಗುವಂತಿಲ್ಲ, ಏಕೆಂದರೆ ಸವಿಯನ್ನು ಪಾಕಶಾಸ್ತ್ರವಲ್ಲ ನಿರ್ಧರಿಸುವದು, ಅವರವರ ನಾಲಗೆ ! ಆದರೆ ಒಬ್ಬೊಬ್ಬನ ನಾಲಗೆ ಒಂದೊಂದು ಬಗೆಯ ಸವಿಯನ್ನೇ ಸರಿಯಾದ ಸವಿಯೆಂದು ಹೇಳುತ್ತದೆ. ಅಲ್ಲವೆ ? ತನ್ನ ತನ್ನ ಅಂತಸ್ತನ್ನು ಅಳತೆಗೆ ತೆಗೆದುಕೊಂಡು ಅನ್ನವೆಂದರೆ ಒಣಕಲು ರೊಟ್ಟಿಯೆಂದೋ ಹಳಸಲು ಸಾರೆಂದೋ ಅಥವಾ ಬಿಸಿಯ ಅನ್ನ, ಸಾರು, ತುಪ್ಪ, ಹಾಲು, ಮೊಸರು, ಹಪ್ಪಳ, ಸಂಡಿಗೆ - ಮುಂತಾದುವುಗಳೆಂದೋ ಇಲ್ಲದಿದ್ದರೆ ಪರಮಾನ್ನ, ಪಂಚಭಕ್ಷ್ಯಗಳೂ ಚೋಷ್ಯಲೇಹ್ಯಗಳೂ ಕೂಡಿರುವ ರಾಜಭೋಜನವೆಂದೋ ಅವನವನು ಅರ್ಥಮಾಡಿಕೊಳ್ಳಬಹುದಲ್ಲದೆ ಅವನವನ ನಾಲಗೆಯ ಸಂಸ್ಕಾರ ವಿದ್ದಂತೆ ಆಯಾ ಪದಾರ್ಥದ ಸವಿಯ ನಿರ್ಣಯವನ್ನೂ ಅವನವನೇ ಮಾಡಿ ಕೊಳ್ಳುತ್ತಿರುತ್ತಾನೆ. ಇದರಂತೆ ಬಟ್ಟೆಯೆಂದರೆ ಮೈ ಮುಚ್ಚಿ ಚಳಿಗಾಳಿಗಳಿಂದ ಮರೆಮಾಡಿಕೊಳ್ಳುವಷ್ಟು ಅರಿವೆಯೆಂದು ಕೆಲವರು ಅರ್ಥಮಾಡಿಕೊಂಡರೆ ಪಂಚೆ, ಧೋತ್ರ, ಶಾಲು, ಅಂಗಿ, ಹ್ಯಾಟು, ಪ್ಯಾಂಟು, ಕೈವಸ್ತ್ರ, ಪೇಟ, ಶಲ್ಯ - ಮುಂತಾದ ವಿಧವಿಧವಾದ ವಸ್ತ್ರಗಳನ್ನೂ ಪಟ್ಟೆಪೀತಾಂಬರಗಳನ್ನೂ ಬಟ್ಟೆ. ಯೆಂಬ ಮಾತಿನಲ್ಲಿ ಅಡಕಮಾಡಿಕೊಂಡ ಮೇಲೂ ಆಯಾ ಬಟ್ಟೆಯ ಬಣ್ಣ, ಅಂಚು, ಕಂಬಿ, ಅಗಲ, ಉದ್ದ - ಮುಂತಾದವುಗಳು ಸರಿಯಾಗಿಲ್ಲದಿದ್ದರೆ ತಮಗೆ ಸರಿಯಾಗಿ ಬಟ್ಟೆ ದೊರೆಕಲ್ಲವೆಂದೇ ಮತ್ತೆ ಕೆಲವರು ಬಗೆಯುತ್ತಾರೆ.

ಇದರಂತೆ ಹಣವೆಂದರೆ ಪದಾರ್ಥಗಳು ಸುಲಭವಾಗಿ ಒಬ್ಬರ ಕೈಯಿಂದೊಬ್ಬರ ಕೈಗೆ ದಾಟುವದಕ್ಕೆ ಅನುಕೂಲವಾಗಿ ಮಾಡಿಕೊಂಡಿರುವ ಬೆಲೆಯನ್ನು ಹೋಲಿಸುವ ಮಧ್ಯಮಸಾಧನಮಾತ್ರವೆಂದೆಣಿಸದೆ ಮಾನವರಲ್ಲಿ ಹಲವರು ಅವರವರಿಗೆ ಸರಿತೋರುವ ಮತ್ತೊಂದರ್ಥವನ್ನು ಅದಕ್ಕೆ ಕಲ್ಪಿಸಿ. ಕೊಂಡಿರುತ್ತಾರೆ. ಹೀಗೆಯೇ ಹೆಂಡತಿಯೆಂದರೆ ಸಂಸಾರವು ಸುಖದಿಂದ ಸಾಗುವದಕ್ಕೆಂದು ಮಾಡಿಕೊಂಡಿರುವ ಜೊತೆಗಾತಿ ಎಂಬರ್ಥವು ಎಲ್ಲಿಯೋ

ಕೆಲವರಿಗೆ ಮಾತ್ರ ತೋರುತ್ತದೆ ; ಮಕ್ಕಳೆಂದರೆ ಸಂತಾನವು ಬೆಳೆಯುವದಕ್ಕಾಗಿ ಅಪೇಕ್ಷಿಸುವ ಮಾನವವಂಶಾಭಿವೃದ್ಧಿಯ ಗುರುತುಗಳೆಂದುಮಾತ್ರವೇ ಎಲ್ಲರೂ ಎಣಿಸುವದಿಲ್ಲ. ಮನೆಯೆಂದರೆ ಚಳಿಗಾಳಿ ಬಿಸಿಲುಗಳಿಗೆ ಮರೆಯಾಗಿರುವದಕ್ಕೆಂದು ಮಾಡಿಕೊಂಡಿರುವ ಆಸರೆಯೆಂದುಮಾತ್ರ ಜನರೆಲ್ಲರೂ ಭಾವಿಸಿರುವದಿಲ್ಲ ; ಹೊಲವೆಂದರೆ ಹೊಟ್ಟೆಯಪಾಡಿಗೆ ಬೇಕಾದಷ್ಟು ದವಸವನ್ನು ಬೆಳೆಯುವ ನೆಲವೆಂದು ಎಲ್ಲರೂ ತಿಳಿದುಕೊಂಡಿಲ್ಲ. ಇವೇ ಮುಂತಾದ ಶಬ್ದಗಳು ಒಬ್ಬೊಬ್ಬರಿಗೆ ಒಂದೊಂದರ್ಥವನ್ನು ಕೊಡುವವು. ಒಬ್ಬೊಬ್ಬನೂ ತನ್ನ ತನ್ನ ಮನಸ್ಸಿನ ಅಂತಸ್ತನ್ನೂ ಸನ್ನಿವೇಶಗಳನ್ನೂ ಅವಲಂಬಿಸಿ ಈ ಶಬ್ದಗಳಿಗೆ ಅರ್ಥವನ್ನು ಮಾಡಿಕೊಳ್ಳುತ್ತಿರುತ್ತಾನೆ. ಇವುಗಳ ಪೂರ್ಣವಾದ ಅರ್ಥವನ್ನು ತಿಳಿಯಬೇಕೆನ್ನುವವರು ಮನುಷ್ಯನ ಬಯಕೆಗಳೆಂಬ ತೆರೆಗಳಿಂದ ಉಲ್ಲೋಲಕಲ್ಲೋಲವಾಗುತ್ತಿರುವ ಆಶಾಸಾಗರದ ಆಚೆಯ ಈಚೆಯ ದಡವನ್ನೂ ಅವುಗಳ ಅವ್ಯಕ್ತರೂಪವಾಗಿರುವ ಸಂಸ್ಕಾರಗಳಿಂದೊಡಗೂಡಿದ ಆ ಕಡಲಿನ ಆಳವನ್ನೂ ನಿರ್ಣಯಿಸುವದು ಅತ್ಯವಶ್ಯವಾಗುವದು ! ಹೀಗಿರುವಲ್ಲಿ ಮನುಷ್ಯನ ಕೋರಿಕೆಗಳು ಇಷ್ಟೇ ಎಂದು ನಿರ್ಣಯಿಸುವದಕ್ಕಾದೀತೆ ?- ಎಂದು ನಮ್ಮಲ್ಲನೇಕರಿಗೆ ತೋರುವದು ಸಹಜವಾಗಿದೆ.

ಹೀಗಿದ್ದರೂ ಕೋರಿಕೆಗಳ ಇಯತ್ತೆಯ ನಿರ್ಣಯವನ್ನು ಮಾಡುವದಕ್ಕೆ ಒಂದು ದಾರಿಯಿದೆ. ಬಯಕೆಯ ಸಮುದ್ರದ ತೆರೆಗಳನ್ನೇನೋ ಎಣಿಸುವದಕ್ಕಾಗುವದಿಲ್ಲ ; ಈ ಕಡಲಿನ ಆಚೆಯ ದಡವನ್ನು ಕಾಣುವದಕ್ಕಂತೂ ಆಗುವದೇ ಇಲ್ಲ. ಆದರೆ ಇದರ ಆಳವನ್ನು ಮಟ್ಟಿಗೆ ಗೊತ್ತುಮಾಡಿಬಿಡಬಹುದು. ಸಮುದ್ರದ ಮೇಲುಗಡೆ, ಆಚೆ, ಈಚೆ - ಇವುಗಳನ್ನು ಗೊತ್ತುಮಾಡುವದಕ್ಕೆ ಹವಣಿಸುವ ಕ್ರಮಕ್ಕೆ **ಅಧಿಭೌತಿಕವಿಚಾರ**ವೆಂದು ಹೆಸರು. ನಮ್ಮ ಹೊರಗೆ ತೋರುವದೆಲ್ಲವೂ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ - ಎಂಬ ಐದೇ ಭೂತಗಳಲ್ಲಿಯೇ ಅಡಕವಾಗಿರುವದರಿಂದ ಈ ಹೊರಗನ್ನು ಪರೀಕ್ಷಿಸುವ ವಿಚಾರಕ್ರಮವನ್ನು ಆಧಿಭೌತಿಕವೆಂದೇ ಕರೆಯಬಹುದಾಗಿದೆ. ಇದೇ ಆಶಾಸಮುದ್ರದ ಆದ್ಯಂತಗಳನ್ನು, ಆಚೆಯ ಈಚೆಯ ದಡಗಳನ್ನು, ಕಂಡುಹಿಡಿಯುವದಕ್ಕೆ ಹೋಗುವ ವಿಚಾರವು. ಈ ವಿಚಾರವು ಎಂದಿಗೂ ಕೊನೆಮುಟ್ಟು

ವದಲ್ಲವೆಂಬುದು ಮೇಲೆಯೇ ಕಾಣಿಸುತ್ತದೆ. ಅನೇಕಕೋಟಿ ಬ್ರಹ್ಮಾಂಡಗಳಲ್ಲಿ ಒಂದಾದ ಈ ಬ್ರಹ್ಮಾಂಡದಲ್ಲಿರುವ ಲೋಕಗಳನ್ನೂ ಅವುಗಳಲ್ಲಿರುವ ಪದಾರ್ಥಜಾತಿಗಳನ್ನೂ ವ್ಯಕ್ತಿಗಳನ್ನೂ ಅವುಗಳ ಸ್ವಭಾವ ಪ್ರಯೋಜನಗಳನ್ನೂ ಕಂಡುಹಿಡಿಯಲು ಹೊರಡುವ ಪ್ರಯತ್ನವು ಎಂದಿಗೆ ಕೊನೆಗಂಡೀತು ? ಈ ಕ್ರಮವನ್ನು ಬಿಟ್ಟು ಇದನ್ನೆಲ್ಲ ಒಳಗಡೆಯಿಂದ ನಿರ್ಣಯಮಾಡುವದಕ್ಕೆ ಹೊರಟರೆ ಕೆಲಸವು ಇಷ್ಟು ಅಗಾಧವಾಗುವದಿಲ್ಲ. ಹೇಗೆಂದರೆ ಯಾವ ವಸ್ತುವಿನ ಅರಿವೇ ನಮಗಾಗುವದಿಲ್ಲವೋ ಆ ವಸ್ತುವಿನ ಬಯಕೆಯು ಆಗುವದಕ್ಕೆ ಅವಕಾಶವೇ ಇರುವದಿಲ್ಲ. ಹೇಗೆಂದರೆ ನಮಗಾಗುವ ಅರಿವೆಲ್ಲ ಐದೇ ಬಗೆ : ಶಬ್ದ, ಸ್ಪರ್ಶ, ರೂಪ, ರಸ, ಗಂಧ. ಹೊರಗಿನ ಪದಾರ್ಥಗಳು ಲೆಕ್ಕಕ್ಕೆ ನಿಲುಕದಷ್ಟು ಅನಂತವಾಗಿದ್ದರೂ ಅವೆಲ್ಲವೂ ಶಬ್ದವೇ ಮುಂತಾದ ಈ ಐದರಲ್ಲಿ ಸೇರಿರುವವೇ ಹೊರತು ಇವಕ್ಕಿಂತ ಬೇರೆಯಾಗಿರುವದಿಲ್ಲ. ಇವುಗಳ ಅರಿವನ್ನು ನಮಗೆ ಉಂಟುಮಾಡುವದಕ್ಕೆ ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು - ಈ ಸ್ಥಾನಗಳಲ್ಲಿ ಐದು ಸಾಧನಗಳಿವೆ. ಈ ಸಾಧನಗಳಿಗೆ **ಕರಣ**ಗಳೆಂದೂ **ಇಂದ್ರಿಯ**ಗಳೆಂದೂ ಹೆಸರು.

ಈ ಇಂದ್ರಿಯಗಳು ಹೊರಗಿನರಿವುಗಳನ್ನು ಮಾತ್ರವೇ ನಮಗೆ ಕೊಡುವವೇ ಹೊರತು ಒಳಗಿನ ತಿಳಿವಳಿಕೆಯನ್ನು ಕೊಡುವದಿಲ್ಲ. ಉದಾಹರಣೆಗೆ ಸಕ್ಕರೆಯನ್ನು ನಾಲಗೆಯ ಮೇಲೆ ಇಟ್ಟರೆ ಸಿಹಿಯಾಗುವದು. ಬೇವಿನಹಣ್ಣನ್ನಿಟ್ಟರೆ ಕಹಿಯಾಗುವದು. ಸಿಹಿಯಾದಾಗ ನಮಗೆ ಸುಖವೂ ಕಹಿಯಾದಾಗ ನಮಗೆ ದುಃಖವೂ ಆಗುವವಷ್ಟೆ. ಈ ಸುಖದುಃಖಗಳನ್ನು ತಿಳಿಸುವ ಶಕ್ತಿ ನಾಲಗೆಗಿಲ್ಲ ; ಅದಕ್ಕಿರುವ ಯೋಗ್ಯತೆಯೆಲ್ಲ ಇಂಥಿಂಥ ರುಚಿಯೆಂದು ತಿಳಿಸುವದೇ. ಇದರಂತೆಯೇ ಹೊರಗಿನ ಸದ್ದು ಈ ಬಗೆಯೆಂದು ಮಾತ್ರವೇ ಕಿವಿಯಲ್ಲಿರುವ ಇಂದ್ರಿಯವು ಹೇಳೀತಲ್ಲದೆ ಅದರಿಂದಾಗುವ ಸುಖವನ್ನೋ ದುಃಖವನ್ನೋ ಅದು ತಿಳಿಯಲಾರದು. ಹೀಗೆಯೇ ಮಿಕ್ಕ ಇಂದ್ರಿಯಗಳ ವಿಷಯವನ್ನೂ ಊಹಿಸಬೇಕು. ಇವುಗಳೆಲ್ಲವೂ **ಬಾಹ್ಯಕರಣ**ಗಳು, ಹೊರಗಿನ ವಿಷಯದ ಯೋಗ್ಯತೆಯನ್ನು ತಿಳಿಸುವಂಥವು. ಆದರೆ ಸುಖ ದುಃಖಗಳು ನಮ್ಮ ಹೊರಗೆ ಇರುವ ಪದಾರ್ಥವಲ್ಲ. ಅವು ನಮ್ಮೊಳಗೇ

ಆಗುತ್ತಿರುತ್ತವೆ. ಈ ಒಳಗಿನ ಸುಖದುಃಖಗಳನ್ನು ತಿಳಿಸುವದಕ್ಕೆ ಮೇಲೆ ಹೇಳಿದ ಐದು ಕರಣಗಳೂ ಉಪಯೋಗವಾಗುವದಿಲ್ಲ ; ಆ ತಿಳಿವಳಿಕೆಗೆ ಬೇಕಾದ ಕರಣಕ್ಕೆ **ಅಂತಃಕರಣ**ವೆಂದು ಹೆಸರು.

ಅಂತೂ ಅಂತಃಕರಣವೊಂದು, ಬಹಿಃಕರಣಗಳು ಐದು - ಹೀಗೆ ಆರು ಕರಣಗಳನ್ನು ಬಿಟ್ಟರೆ ನಮಗೆ ಅರಿವು ಉಂಟಾಗುವದಕ್ಕೆ ಬೇರೆ ಯಾವದೊಂದು ದ್ವಾರವೂ ಇಲ್ಲವಾದ್ದರಿಂದ ನಮ್ಮ ಕೋರಿಕೆಗಳಿಗೆಲ್ಲ ಈ ಆರು ಕರಣಗಳೇ ಮೂಲವೆಂದಾಯಿತಷ್ಟೆ. ಆದ್ದರಿಂದ ಮನುಷ್ಯನಿಗೆ ಆಗುವ ಬಯಕೆಯೆಂಬುದು ಈ ಆರು ದ್ವಾರಗಳಲ್ಲಿ ಯಾವದರಲ್ಲಿ, ಎಷ್ಟು ಬಗೆಯಿಂದ, ಹೇಗೆ, ಏನು ಕಾರಣದಿಂದ ಹುಟ್ಟುವದೆಂಬುದನ್ನು ಗೊತ್ತುಪಡಿಸಿದರೆ ಆಶಾಸಮುದ್ರದ ಆಳವನ್ನೇ ನಿರ್ಣಯಮಾಡಿದಂತಾಗುವದು. ಹೀಗೆ ನಮ್ಮೊಳಗಿನ ಶರೀರೇಂದ್ರಿಯಾಂತಃಕರಣಗಳ ಕಾರಣವನ್ನೂ ಸ್ವರೂಪವನ್ನೂ ಕಾರ್ಯವನ್ನೂ ಕುರಿತು ವಿಚಾರಮಾಡುವ ಕ್ರಮಕ್ಕೆ **ಆಧ್ಯಾತ್ಮಿಕವಿಚಾರ**ವೆಂದು ಹೆಸರು. ಆತ್ಮನೆಂದರೆ ತಾನು. ತನ್ನೊಳಗೇ ವಿಚಾರಮಾಡುವದು ಆಧ್ಯಾತ್ಮಿಕವಿಚಾರವು. ದೊಡ್ಡವರಾದವರು ಈ ಕ್ರಮದಲ್ಲಿ ವಿಚಾರಮಾಡಿ **ಮನುಷ್ಯನಿಗಿರುವ ಕೋರಿಕೆಯೆಲ್ಲ ಒಂದೇ ಒಂದು** - ಎಂದು ನಿರ್ಣಯಿಸಿರುತ್ತಾರೆ. ಇದು ಯಾವದೆಂಬುದು ಈ ಪ್ರಕರಣದಲ್ಲಿ ಮುಂದೆ ಸ್ಪಷ್ಟವಾಗುವದು.

☆☆☆☆

# ೨. ಕೋರಿಕೆಗಳಿಗೆ ಗುರಿ

**ಪರ್ಯಾಪ್ತಕಾಮಸ್ಯ ಕೃತಾತ್ಮನಸ್ತು ಇಹೈವ ಸರ್ವೇ ಪ್ರವಿಲೀಯನ್ತಿ ಕಾಮಾಃ**
- ಮುಂ. ೩-೨-೨.*

ನಮಗೆಲ್ಲರಿಗೂ ಒಂದೇ ಒಂದು ಕೋರಿಕೆಯಿರುವದು ; ಅದು ನೆರವೇರಿದ ಹೊರತು ನಾವು ಸುಮ್ಮನಿರುವಹಾಗಿಲ್ಲ. ಅದು ಯಾವದೆಂದರೆ **ನಿತ್ಯ ನಿರತಿಶಯ ವಾದ ಸುಖ.** ಎಂದೆಂದಿಗೂ ಇದ್ದುಕೊಂಡಿರುವ, ಇದಕ್ಕೆ ಮಿಗಿಲಿಲ್ಲವೆನ್ನಿಸುವ ಆನಂದದಲ್ಲಿ ನಾವು ಯಾವಾಗಲೂ ಮುಳುಗಿರಬೇಕೆಂಬುದೇ ನಮ್ಮಗಳೆಲ್ಲರ ಬಯಕೆ. ಈ ಬಯಕೆಯು ನಮ್ಮಲ್ಲಿ ಕೆಲವರಲ್ಲಿ ಎದ್ದು ಕಾಣುವದು, ಮತ್ತೆ ಕೆಲವರಲ್ಲಿ ಇದು ರೂಪಾಂತರದಲ್ಲಿ ತೋರುವದು. ಅಲ್ಪಸ್ವಲ್ಪವಾಗಿಯಾದರೂ ಆ ಆಶೆಯು ತೋರಿಕೊಳ್ಳದ ಪ್ರಾಣಿಯೇ ಇಲ್ಲ. ತಿಳಿದೋ ತಿಳಿಯದೆಯೋ ನಾವೆಲ್ಲರೂ ಇದಕ್ಕಾಗಿಯೇ ಹೋರಾಡುತ್ತಿರುವೆವು. ಅನ್ನ, ಬಟ್ಟೆ, ಹಣ, ಹೆಂಡತಿ, ಮಕ್ಕಳು, ಮನೆ, ದನ, ಹೊಲ, ಆಳುಕಾಳು, ಹೆಸರುವಾಸಿ, ಬುದ್ಧಿ, ಸಿದ್ಧಿ- ಇವುಗಳೆಲ್ಲ ನಮ್ಮ ಆನಂದಕ್ಕೇ ಹೊರತು ಮತ್ತೇತಕ್ಕೆ ? ಇವುಗಳಲ್ಲಿ ಒಂದನ್ನು ಬಿಟ್ಟು ಮತ್ತೊಂದಕ್ಕೆ ನಾವು ಹಾತುವರಿಯುತ್ತಿರುವದೇತಕ್ಕೆ ? ನಮಗೆ ಬೇಕಾದ ಹೆಚ್ಚಿನ ಆನಂದಕ್ಕೇ ಅಲ್ಲವೆ ? ಹೀಗೆ ತನಗೆ ಹೆಚ್ಚಿನ ಆನಂದವು ಬೇಕೆಂಬುದನ್ನು ಪ್ರತಿಯೊಬ್ಬನೂ ತನ್ನ ನಡೆಯಿಂದ ತೋರಿಸಿಕೊಳ್ಳುತ್ತಿರುವನು. "ನನಗೆ ಅದರಮೇಲೆ ಪ್ರೀತಿ, ಇದರಮೇಲೆ ಹೆಚ್ಚು ಪ್ರೀತಿ" ಎನ್ನುತ್ತಿರುವದೆಲ್ಲ ತನ್ನ ಆನಂದಕ್ಕೆ ಅವು ಸಾಧನವೆಂಬುದರ ಮೇಲೆಯೇ. ಮನುಷ್ಯನು ಏನೋ ಹುಡುಕುವವನಂತೆ ಒಂದು ವಸ್ತುವಾಗುತ್ತಲೂ ಒಂದನ್ನು ಸಂಪಾದಿಸಿ ಕೊಳ್ಳುತ್ತಲೂ ಅದು ನಿಸ್ಸಾರವೆಂದು ಬಿಡುತ್ತಲೂ ಮತ್ತೊಂದರಲ್ಲಿ ತನಗೆ ಬೇಕಾದ ಸವಿಯಿರುವದೆಂದು ಭಾವಿಸುತ್ತಲೂ ಇರುವನು. ಕುರುಡರು ತಡಕಾಡುವಂತೆ ವಸ್ತುಗಳಲ್ಲಿ ಮನುಷ್ಯನು ಹುಡುಕುತ್ತಿರುವದು ಏನು ? ನಿತ್ಯಾನಂದವೇ. "ಇದಕ್ಕಿಂತ ಅದು ಹೆಚ್ಚು, ಅದಕ್ಕಿಂತ ಮತ್ತೊಂದು ಹೆಚ್ಚು" -

* ಬಯಕೆಗಳನ್ನು ತೀರಿಸಿಕೊಂಡು ತನ್ನನ್ನು ತಾನು ಪಡೆದುಕೊಂಡಿರುವವನಿಗೆ ಇಲ್ಲಿಯೇ ಕೋರಿಕೆಗಳೆಲ್ಲವೂ ಅಡಗಿಹೋಗುವವು.

ಎಂದು ಬೆಲೆ ಕಟ್ಟುತ್ತಿರುವದು ಏತರ ಆಧಾರದಿಂದ ? ಅದರಲ್ಲಿ ತನಗೆ ಸಿಕ್ಕಬೇಕೆಂದು ತಾನು ಹಾರೈಸುವ ಆನಂದದ ಆಧಾರದಿಂದಲೇ. ಇನ್ನಿಲ್ಲವೆನ್ನುವ, ಎಂದೆಂದಿಗೂ ಇದ್ದುಕೊಂಡಿರುವ ಆನಂದವು ಅವನಿಗೆ ಬೇಕಾಗಿದೆ.

ಈ ನಿತ್ಯ ನಿರತಿಶಯವಾದ **ಆನಂದ**ವು ನಮ್ಮಲ್ಲಿಯೇ ಇದ್ದು ಕೊಂಡಿರುತ್ತದೆ. ಈ ಗುಟ್ಟನ್ನು ಮೂಢರು ಅರಿಯರು ; ಆದ್ದರಿಂದ ಅವರು ''ಅದು ಬೇಕು, ಇದು ಬೇಕು'' ಎಂಬ ಬಯಲುಕೋರಿಕೆಗಳನ್ನಿಟ್ಟು ಕೊಂಡಿರುವರು. ತನ್ನಲ್ಲಿರುವ ನಿತ್ಯಾನಂದವನ್ನು ಅರಿತು ಕೋರಿಕೆಗಳನ್ನೆಲ್ಲ ಅಡಗಿಸಿಕೊಳ್ಳುವದೇ ಮನುಷ್ಯನಿಗೆ ಬೇಕಾದ ನಿಜವಾದ ಪುರುಷಾರ್ಥವು. ಅಲ್ಲಿಯವರೆಗೆ ಇವನಿಗೆ ಬಿಡುಗಡೆಯಿಲ್ಲ. ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ಜಟಕಾ ಕುದುರೆಗಳಂತೆ ಬೆಳಗಿನಿಂದ ರಾತ್ರಿ ಮಲಗುವರೆಗೂ ದುಡಿದು ದುಡಿದು ಸಾಯುತ್ತಿರುವ ನಿರ್ಬಂಧವನ್ನು ತಪ್ಪಿಸಿಕೊಂಡು ಹಾಯಾಗಿರಬೇಕೆಂಬುದು ಮನುಷ್ಯನಿಗಿರುವ ಸಹಜವಾದ ಕೋರಿಕೆ. ಈ ಕೋರಿಕೆ ನೆರವೇರಿದರೆ ಎಲ್ಲಾ ಕೋರಿಕೆಗಳೂ ನೆರವೇರಿದಂತೆ. ಇದು ನೆರವೇರದಿದ್ದರೆ ಏನೂ ದೊರೆತಂತಾಗ ಲಿಲ್ಲ ; ತನ್ನಲ್ಲಿರುವ ನಿತ್ಯನಿರತಿಶಯವಾದ ಆನಂದವನ್ನು ಕಂಡುಕೊಂಡರೆ ಎಲ್ಲವನ್ನೂ ಕಂಡಂತೆ, ಎಲ್ಲವನ್ನೂ ಮಾಡಿದಂತೆ, ಎಲ್ಲವನ್ನೂ ಪಡೆದು ಕೊಂಡಂತೆ.

ಇದನ್ನು ಕೆಲವರು ಮಹನೀಯರು ಮಟ್ಟಿಗೆ ಅರಿತಿರುವರು. ಅವರು ''ನಾನೇನು ಮಾಡಲಿ ?'' ಎಂಬುದನ್ನು ಗೊತ್ತು ಮಾಡಿಕೊಳ್ಳುವದಕ್ಕಾಗಿ ಪುಸ್ತಕಗಳ ಹಾಳೆಗಳನ್ನು ಮಗುಚಿಹಾಕುವದಿಲ್ಲ ; ''ಮನೆಯಾಗಬೇಕು, ಮಠ ವಾಗಬೇಕು, ಹೊಲವಾಗಬೇಕು, ಗದ್ದೆಯಾಗಬೇಕು'' - ಎಂದು ಹೊರಗಿನ ವಸ್ತುಗಳ ಚಿಂತೆಯ ಲಂಪಟದಲ್ಲಿಯೇ ಬಿದ್ದಿರುವದೂ ಇಲ್ಲ. ಅವರಿಗೆ ಬೇಕಾಗಿರುವದೆಲ್ಲ ಒಂದೇ ಒಂದು. ನಿತ್ಯಾನಂದ ! ರೋಗಿಯಾದವನಿಗೆ ಬೇಕಾಗಿರುವದೇನು ? ಆರೋಗ್ಯ. ಅದರಂತೆ ಮನುಷ್ಯನಿಗೆ ಬೇಕಾಗಿರು ವದೇನು ? ತನ್ನಲ್ಲಿರುವ ನಿರತಿಶಯಾನಂದವನ್ನು ಕಂಡುಕೊಂಡು ಧನ್ಯ ನಾಗುವದು. ನಮ್ಮ ಜನ್ಮದ ಸಾರ್ಥಕ್ಯವು ಹೇಗಾದೀತು ? ಅವರಿವರ ಸಂಗಡ ಪೈಪೋಟಿಯಿಂದ ಹೆಚ್ಚಾಗಿ ಸಂಪಾದನೆಮಾಡಿ ''ಇದನ್ನು ಯಾವಾಗ ಯಾರು ಎತ್ತಿ

ಹಾಕುವರೊ'' ಎಂದು ಹೆದರುತ್ತಾ ಕೊರುವದು ನಮ್ಮ ಜೀವಿಕೆಯ ಮುಖ್ಯ ಕರ್ತವ್ಯವಲ್ಲ. ಯಾವ ಕೋರಿಕೆಯ ನಿರ್ಬಂಧಕ್ಕೂ ಸಿಕ್ಕದೆ ಬಿಡುಗಡೆಯನ್ನು ಹೊಂದಿ ಒಬ್ಬರಿಗೂ ಅಸೂಯೆಯನ್ನು ಹುಟ್ಟಿಸದೆ, ಯಾರೊಡನೆಯೂ ಪೈಪೋಟಿಯನ್ನೂ ಮಾಡಬೇಕಾದ ಅವಶ್ಯಕತೆಯೇ ಇಲ್ಲದೆಯೇ ಪಡೆದು ಕೊಳ್ಳಬಹುದಾದ, ಸರಿಮಿಗಿಲಿಲ್ಲದ, ಎಂದೆಂದಿಗೂ ಸವೆಯದ ಆನಂದವನ್ನು ತಿಳಿದುಕೊಂಡು ಪಡೆದುಕೊಳ್ಳುವದೇ ನಮ್ಮ ಕೋರಿಕೆ. ಇದೇ ಪುರುಷಾರ್ಥವು. ಹೀಗೆಂದು ತಿಳಿದು ಯಾರು ಇದೊಂದಕ್ಕಾಗಿಯೇ ಪ್ರಯತ್ನಪಡುತ್ತಿರುವರೋ ಅವರಿಗೆ **"ಮುಮುಕ್ಷುಗಳು"** ಎಂದು ಹೆಸರು.

ಉಳಿದವರಲ್ಲಿ ಕೆಲವರು **"ಪಾಮರರು"** ಎಂದರೆ ಏನೊಂದನ್ನೂ ತಿಳಿಯದೆ ಮೃಗಾದಿಗಳಂತೆ ಆಹಾರನಿದ್ರಾದಿಗಳನ್ನು ಬಂದಬಂದ ಹಾಗೆ ಅನುಭವಿಸುತ್ತಿರುವವರು. ಮತ್ತೆ ಕೆಲವರು **"ವಿಷಯಿಗಳು"** ಎಂದರೆ ಬಿಸಿಲು ಕುದುರೆಯ ಬಯಲುನದಿಯಲ್ಲಿ ನೀರಡಿಕೆಯನ್ನು ಕಳೆದುಕೊಳ್ಳಬೇಕೆಂದು ವೈಶಾಖಮಾಸದ ಮಟಮಟಮಧ್ಯಾಹ್ನದಲ್ಲಿ ಓಡಿಓಡಿ ಹೋಗಿ ನೀರೆಂದು ತಾವು ಭ್ರಮಿಸಿದ್ದ ಕಡೆಯಲ್ಲಿ ಬರಿಯ ಬಯಲೇ ಇರುವದನ್ನು ಕಂಡು ''ಸುಮ್ಮ ಸುಮ್ಮನೆ ಆಯಾಸಪಟ್ಟೆವಲ್ಲ !'' ಎಂದು ವ್ಯಥೆಪಡುತ್ತಿರುವ ಕಾಡು ಜಿಂಕೆಗಳಂತೆ ''ಇದು ಬೇಕು, ಅದು ಬೇಕು'' ಎಂದು ಹೊರಗಿನ ಪದಾರ್ಥಗಳ ಸಂಪಾದನೆಗಾಗಿ ಮೈನೋಯಿಸಿಕೊಳ್ಳುತ್ತಲೂ ಅವುಗಳಿಂದ ಸುಖವನ್ನು ಹೊಂದದೆ ಪಶ್ಚಾತ್ತಾಪ ಪಡುತ್ತಲೂ ''ಈ ಸಲ ಇದನ್ನು ಸಂಪಾದಿಸೋಣ'' ಎಂದು ಮತ್ತೆ ಮತ್ತೆ ವಿಷಯಗಳ ಕಡೆಗೆ ಜೋಲುಬೀಳುತ್ತಲೂ ತೊಳಲುತ್ತಿರುವ ಸಂಸಾರಿಗಳು.

ಹೀಗೆ ಲೋಕದ ಜನರು ಮೂರು ಪಂಗಡವಾಗಿ ವ್ಯವಹರಿಸುತ್ತಿರುವರು. ಇವರಲ್ಲಿ ಮನುಷ್ಯನಿಗೆ ಬೇಕಾದದ್ದೆಲ್ಲ ನಿತ್ಯಾನಂದವೊಂದೇ ಎಂದು ನಿಶ್ಚಯಿಸಿ ಅದನ್ನು ಪಡೆದು ಸುಖವಾಗಿರಬೇಕೆಂದು ಸರಿಯಾದ ಮಾರ್ಗದಿಂದ ಪ್ರಯತ್ನಮಾಡುವ ಮುಮುಕ್ಷುಗಳೆಂಬ ಮಹಾತ್ಮರೇ ಈ ಜಗತ್ತಿನಲ್ಲಿ ಧನ್ಯರು.

☆☆☆☆

# ೩. ಸೌಖ್ಯದ ದಾರಿಯಲ್ಲಿ ಕವಲುಗಳು

**ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ।**
**ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ ॥***

**ಗೀತೆ – ೨, ೬೩**

ಮುಮುಕ್ಷುಗಳು ನಡೆಯುತ್ತಿರುವದು **ಸೌಖ್ಯದ ಹೆದ್ದಾರಿ.** ವಿಷಯಿಗಳೂ ಇದೇ ದಾರಿಯಲ್ಲಿಯೇ ನಡೆಯುತ್ತಿರುವರಾದರೂ ಅವರು ಅಲ್ಲಲ್ಲಿ ಕವಲೊಡೆಯುವ ಸೀಳುದಾರಿಗಳಿಗೆ ಹೋಗಿ ಕಲ್ಲುಮುಳ್ಳುಗಳನ್ನು ತುಳಿದು ದುಃಖಪಡುತ್ತಾ ಮುಂದುಗಾಣದೆ ಎಲ್ಲೆಲ್ಲಿಯೋ ಸುತ್ತಾಡುತ್ತಿರುವರು. ಎಲ್ಲರೂ ಸೇರಬೇಕಾದದ್ದೇನೋ ಒಂದೇ ಸ್ಥಳವೇ. ಆದರೆ ಮುಮುಕ್ಷುಗಳಿಗೆ ಅದಕ್ಕೆ ಬೇಕಾದ ಸರಿಯಾದ ಮಾರ್ಗವು ಯಾವಾಗಲೂ ನೆನಪಿನಲ್ಲಿರುತ್ತದೆ. ಇವರು ಎಂದಿಗೂ ಹೆದ್ದಾರಿಯನ್ನು ಬಿಟ್ಟು ಸೀಳುಹಾದಿಗೆ ಹೆಜ್ಜೆಯಿಡುವದಿಲ್ಲ. ಆದ್ದರಿಂದ ಇವರಿಗೆ ದಾರಿತಪ್ಪುವ ಸಂಭವವೇ ಇರುವದಿಲ್ಲ.

ವಿಷಯಿಗಳನ್ನು ದಾರಿತಪ್ಪಿಸಿ ಕೊರಕಲಿಗೊಯ್ಯುವ ಸೀಳುದಾರಿಗಳು ಯಾವುವು ? ಅವು ಮುಖ್ಯವಾಗಿ ಆರು ಕಡೆಗೆ ಒಡೆದುಕೊಂಡಿರುತ್ತವೆ. ಅವುಗಳನ್ನು ಕಂಡರೆ ಮೂಢರಿಗೆ ಬಲು ಅಕ್ಕರೆ. ಅವುಗಳ ಹೆಸರು ಏನೆಂದರೆ : ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ. ಇವುಗಳಲ್ಲಿ ಒಂದೊಂದೂ ಸಾವಿರಾರು ಸೀಳುಗಳಾಗಿರುತ್ತವೆ. ಈ ದಾರಿಯನ್ನು ಹಿಡಿದವರಿಗೆ ತಾವು ಎಲ್ಲಿಗೆ ಹೋಗುತ್ತಿದ್ದೇವೆಯೆಂಬುದಾಗಲಿ ಎಲ್ಲಿಂದ ಬಂದಿರುವೆವೆಂಬು ದಾಗಲಿ ತಿಳಿಯುವದೇ ಇಲ್ಲ. ಯಾರಾದರೂ "ಅಯ್ಯೋ, ದಾರಿ ತಪ್ಪಿದ್ದೀರಲ್ಲ !" ಎಂದು ನೆನಪುಕೊಟ್ಟರೆ ಈ ದಾರಿಯಲ್ಲಿ ಹೋಗುವವರಿಗೆ ಕೆಂಡದಂಥ ಸಿಟ್ಟು ! ಚಕ್ರಭೀಮನ ಕೋಟೆಯಂತೆ ಒಂದರೊಳಕ್ಕೆ ಮತ್ತೊಂದು ನುಗ್ಗಿರುವ ಕಾಮಾದಿಗಳೆಂಬ ಈ ಸೀಳುಹಾದಿಗಳಲ್ಲಿ ನಡೆಯುವ ಜನರು

* ವಿಷಯಗಳಲ್ಲಿ ಆಸಕ್ತಿಯನ್ನಿಡುವದರಿಂದ ಅವುಗಳಲ್ಲಿ ಆಸೆಯುಂಟಾಗುವದು. ಆಸೆಯಿಂದ ಸಿಟ್ಟುಂಟಾಗುವದು, ಸಿಟ್ಟಿನಿಂದ ಭ್ರಾಂತಿಯುಂಟಾಗುವದು. ಭ್ರಾಂತಿಯಿಂದ ಪರಮಾರ್ಥದ ನೆನಪೇ ತಪ್ಪಿಹೋಗುವದು.

ಲಕ್ಷವಿಲ್ಲದಷ್ಟು. ಆದ್ದರಿಂದ ಅವರುಗಳು ನಡೆದು ನಡೆದು ಸವೆದಿರುವ ಇವೂ ಕ್ರಮವಾದ ದಾರಿಗಳೇ ಎಂಬ ಭ್ರಾಂತಿಯನ್ನು ಉಂಟುಮಾಡುತ್ತಿರುವವು.

ಕಾಮಾದಿಗಳ ದಾರಿಯಲ್ಲಿ ನಡೆಯುತ್ತಿರುವವರಿಗೆ ಒಂದು ದೊಡ್ಡ ಹುಚ್ಚು ಹಿಡಿದಿರುತ್ತದೆ. ಅದೇನೆಂದರೆ ಈ ಜಗತ್ತಿನಲ್ಲಿರುವವರಿಗೆಲ್ಲರಿಗೂ ಆಗುವಷ್ಟು ಭೋಗಸಾಮಗ್ರಿಯು ಇಲ್ಲವೆಂತಲೂ ಆದ್ದರಿಂದ ಆದಷ್ಟು ಉಪಾಯದಿಂದ, ಆದಷ್ಟು ಬೇಗನೆ, ಆದಷ್ಟು ಹೆಚ್ಚಿನ ಸಂಖ್ಯೆಯ ಸುಖಸಾಮಗ್ರಿಗಳನ್ನು ಒದಗಿಸಿಕೊಳ್ಳುವವರೇ ಜಾಣರೆಂತಲೂ ಅವರೆಲ್ಲರ ಅಭಿಪ್ರಾಯವಿರುವದು. ದೊಡ್ಡದೊಂದು ಸಮಾರಾಧನೆಯಾದ ಬಳಿಕ ಜನರು ಉಂಡು ತೃಪ್ತಿಯಾಗಿ ಚೆಲ್ಲಿರುವ ಭಕ್ಷ್ಯಭೋಜ್ಯಾದಿಗಳ ಶೇಷವನ್ನೂ ಎಂಜಲೆಲೆಗಳನ್ನೂ ಎಂಜಲು ಗುಂಡಿಗೆ ಹಾಕಿರುವರಷ್ಟೆ ? ಆಗ ನಾಯಿಗಳು ಮೂರೋ ನಾಲ್ಕೋ ಅಲ್ಲಿಗೆ ಬಂದು ಸೇರುವುವು. ಅವುಗಳೆಲ್ಲ ತಿಂದರೂ ಒಂದೊಂದಕ್ಕೂ ಹೊಟ್ಟೆಯೊಡೆಯು ವಷ್ಟಾಗಿ ಇನ್ನೂ ಎಷ್ಟೋ ಮಿಗುವಷ್ಟು ಆಹಾರವು ಗುಂಡಿಯಲ್ಲಿ ಬಿದ್ದಿರುತ್ತದೆ ಯಾದರೂ ಆ ಮೂಢಪ್ರಾಣಿಗಳು ಒಂದರಮೇಲೊಂದು ಬೀಳುತ್ತಲೂ ಬಗಳು ತ್ತಲೂ ಕಚ್ಚಾಡುತ್ತಲೂ ಇಲ್ಲದ ಗದ್ದಲವನ್ನು ಎಬ್ಬಿಸುವವು ! ಅವುಗಳಲ್ಲಿ ಒಂದೆರಡು ಬಲವಾದ ನಾಯಿಗಳು ತಮಗಾಗುವಷ್ಟು ತಿಂದಮೇಲೂ ಆಹಾರವನ್ನು ಮತ್ತೊಂದು ನಾಯಿಯು ಮುಟ್ಟದಂತೆ ಅಡ್ಡಗಟ್ಟಿಕೊಂಡು ಹಲ್ಲುಕಿರಿದು ಬಗಳುತ್ತಾ ಇರುವವು. ಇದೇ ನಾಯಿಗಳಿಗೆ ಆಹಾರವು ಸಿಕ್ಕುವದೇ ಕಷ್ಟವಾಗಿರುವ ಸಾಮಾನ್ಯದಿನಗಳಲ್ಲಿ ಇವು ಒಂದುಕಡೆ ಸೇರಿಕೊಂಡು ಚಿಣ್ಣಾಟವಾಡುತ್ತಲೋ ಒಂದನ್ನೊಂದು ನೆಕ್ಕುವದು ಮುಂತಾದ ರೀತಿಯಿಂದ ಪರಸ್ಪರ ಸಹಾನುಭೂತಿಯನ್ನು ತೋರಿಸುತ್ತಲೋ ತೆಪ್ಪಗಿರುವವು. ಅಲ್ಪಸ್ವಲ್ಪ ಆಹಾರವು ಸಿಕ್ಕರೆ ಹೇಗೋ ಹೊಟ್ಟೆಯನ್ನು ಹೊರೆದುಕೊಂಡು ಗದ್ದಲವಿಲ್ಲದೆ ಕಾಲಹಾಕುವವು. ಆಹಾರವು ಚೆನ್ನಾಗಿ ಸಿಕ್ಕಿತೋ ಇಲ್ಲವೋ ಎಲ್ಲಿಯೂ ಇಲ್ಲದಿದ್ದ ಹೋರಾಟವು ಪ್ರಾರಂಭವಾಗುವದು ! ಆಹಾರವು ಬೇಗ ತೀರಿಹೋದೀತೆಂಬ ಭೀತಿಯು ಎಲ್ಲಾ ನಾಯಿಗಳಿಗೂ ಅಂಟಿಕೊಳ್ಳುವದು ! ಇದರಂತೆಯೇ ಲೋಕದಲ್ಲಿರುವ ಕಾಮಾದಿಗಳಿಗೆಲ್ಲ ವಿಷಯಸಾಮಗ್ರಿಯು ಹೆಚ್ಚಾಗಿರುವದೇ ಮೂಲವೆಂದು ತಿಳಿಯಬೇಕು. ಈ ವಸುಂಧರೆಯಲ್ಲಿ ಯಾವದೊಂದಕ್ಕೂ

ಕಡಿಮೆಯಿಲ್ಲ, ಪ್ರತಿಯೊಂದು ಪದಾರ್ಥವೂ ನಮಗೆ ಆಗಬೇಕಾದಷ್ಟು ಇದ್ದೇ ಇರುವದು. ಆದರೂ ವಿಷಯಿಗಳು ಸುಖಸಾಮಗ್ರಿಯು ಲೋಕದಲ್ಲಿ ಕಡಿಮೆಯೆಂತಲೂ ತಾವು ತಮಗೆ ಬೇಕಾದಷ್ಟನ್ನು ಕೂಡಿಹಾಕಿಕೊಳ್ಳದಿದ್ದರೆ ಯಾರಾದರೂ ಅದನ್ನು ಹಾರಿಸಿಬಿಡುವರೆಂತಲೂ ತಪ್ಪಾಗಿ ತಿಳಿದುಕೊಂಡು ಸಲ್ಲದ ಹೆಣಗಾಟವನ್ನು ಮೈಮೇಲೆ ಕೆಡವಿಕೊಂಡಿರುತ್ತಾರೆ !

ಈಗಿನ ಕಾಲದಲ್ಲಿ ವಿಷಯಸಂಪತ್ತನ್ನು ಮಿತಿಮೀರಿ ಜೋಡಿಸಿಟ್ಟು ಕೊಂಡಿರುವ ಜನಾಂಗಗಳನ್ನು ನೋಡಿದರೆ ಇದು ಹೆಚ್ಚು ವ್ಯಕ್ತವಾಗುವದು. ಪಶ್ಚಿಮದೇಶದ ಜನಗಳು ನಾಗರಿಕರಲ್ಲೆಲ್ಲ ಅಗ್ರಗಣ್ಯರೆನಿಸಿಕೊಂಡಿರುವರು. ಭೌತಿಕಶಾಸ್ತ್ರದ ಮರ್ಮಗಳಲ್ಲನೇಕವನ್ನು ಅವರು ಭೇದಿಸಿರುವರು, ಪೂರ್ವ ರಾಜ್ಯಗಳನ್ನು ನಾನಾರೀತಿಗಳಲ್ಲಿ ತಮ್ಮ ವಶಕ್ಕೆ ಬರಮಾಡಿಕೊಂಡಿರುವರು. ಜನರು ಸುಖಸಾಮಗ್ರಿಗಳೆಂದು ಹೇಳಿಕೊಳ್ಳುವ ಅತ್ಯುತ್ತಮ ವಿಷಯಸಂಪತ್ತು ಗಳು ಇವರ ಅಧೀನವಾಗಿರುವವು. ಭೂಮಿಯಲ್ಲಿ ಆಳವಾಗಿ ಗಣಿಗಳನ್ನು ಅಗೆದು ಬೆಲೆಯುಳ್ಳ ಲೋಹಗಳನ್ನು ಕೈವಶಮಾಡಿಕೊಂಡಿರುವರು. ಸಮುದ್ರಗಳ ಮೇಲೂ ಒಳಗೂ ಚಿತ್ರವಿಚಿತ್ರಗತಿಯುಳ್ಳ ನೌಕೆಗಳನ್ನು ನಡೆಯಿಸುತ್ತಿರುವರು, ಬೆಟ್ಟಗಳನ್ನೂ ಪರ್ವತಗಳನ್ನೂ ಕಾಂತಾರಗಳನ್ನೂ ಧೈರ್ಯದಿಂದ ಶೋಧನೆ ಮಾಡಿ ಬಗೆಬಗೆಯ ತರುಗುಲ್ಮಲತಾದಿಗಳಿಂದ ತಮಗೆ ಬೇಕಾದ ಸಾಮಗ್ರಿಗಳನ್ನು ಕೂಡಿಹಾಕಿಕೊಂಡಿರುವರು. ಆಕಾಶದಲ್ಲಿ ನಿರಂಕುಶವಾಗಿ ನಡೆಯುತ್ತಿರುವ ವಿಮಾನಗಳನ್ನು ಕಂಡುಹಿಡಿದುಕೊಂಡಿರುವರು. ಕಲಾಕೌಶಲ್ಯದಿಂದ ಬಗೆಬಗೆಯ ಆಹಾರ, ಪಾನ, ವಸ್ತ್ರ, ಗೃಹ, ಯಾನ, ವಿಹಾರೋದ್ಯಾನ - ಮುಂತಾದವು ಗಳನ್ನು ಬೇಕುಬೇಕಾದಂತೆ ಕಲ್ಪಿಸಿಕೊಂಡಿರುವರು. ತಮ್ಮ ದೇಶದಲ್ಲಿ ಯಾರಿಗೂ ಯಾವದಕ್ಕೂ ಕೊರತೆಯಾಗದಷ್ಟನ್ನು ಸಂಪಾದಿಸಿಕೊಂಡಿರುವರು. ಆದರೂ ಪಶ್ಚಿಮದೇಶದಲ್ಲಿರುವಷ್ಟು ಬಲವಾದ ಕಾಮಕ್ರೋಧಗಳ ಭೀತಿಯು ಜಗತ್ತಿನಲ್ಲಿ ಮತ್ತೆಲ್ಲಿರುವದು ? ಜಗತ್ತಿನ ಇತಿಹಾಸದಲ್ಲಿಯೇ ಅತ್ಯಂತ ಘೋರವೆನಿಸಿದ ಒಂದು ಯುದ್ಧವನ್ನು ಪಾಶ್ಚಾತ್ಯರು ನಾಲ್ಕು ವರುಷಗಳವರೆಗೆ ನಡೆಯಿಸಿ ಕೋಟಿಗಟ್ಟಲೆಯ ಸ್ವರ್ಣ ನಾಣ್ಯಗಳನ್ನು ಖರ್ಚುಮಾಡಿ ಕೊನೆಗೆ ಹೇಗೋ ಅದನ್ನು ನಿಲ್ಲಿಸಿಕೊಂಡೆವೆಂದು ಹಿಗ್ಗುತ್ತಿರಲು ಅದಾದ ಇಪ್ಪತ್ತು ವರ್ಷಗಳಿಗೆ

ಸರಿಯಾಗಿ ಮತ್ತೊಂದು ಪೆಡಂಭೂತದ ಯುದ್ಧವು ತಲೆಹಾಕಿ ಯೂರೋಪು ಖಂಡವನ್ನೆಲ್ಲ ರುದ್ರಭೂಮಿಯಾಗಿ ಮಾಡಿದ್ದಲ್ಲದೆ ಇಡೀ ಭೂಮಂಡಲವನ್ನೇ ತನ್ನ ತಾಂಡವಲೀಲೆಗೆ ರಂಗಸ್ಥಳವಾಗಿ ಮಾಡಿಕೊಂಡುಬಿಟ್ಟಿರುತ್ತದೆ ! ಈಗ ಹಣಗಾರರಿಗೂ, ಕೂಲಿಗಾರರಿಗೂ, ಪ್ರಜಾಸತ್ತಾತ್ಮಕ ರಾಜ್ಯವಾದಿಗಳಿಗೂ, ನಿರಂಕುಶಸ್ವತಂತ್ರಾಧಿಕಾರಿಗಳ ಕಡೆಯವರಿಗೂ, ಸಮತಾವಾದಿಗಳಿಗೂ, ತಾರತಮ್ಯವಾದಿಗಳಿಗೂ, ರಾಜ್ಯಭಾರದವರಿಗೂ ಪ್ರಜಾವರ್ಗದವರಿಗೂ, ವ್ಯಾಪಾರಿಗಳಿಗೂ, ಕೈಕೆಲಸದವರಿಗೂ, ವಿದ್ಯಾವಂತರಿಗೂ, ಜನಸಾಮಾನ್ಯಕ್ಕೂ - ಹೀಗೆಲ್ಲ ಪರಸ್ಪರವಾಗಿ ಪೈಪೋಟಿಯು ಮೇರೆವರೆದು ದ್ವೇಷಾಸೂಯೆಗಳು ಹೆಚ್ಚುತ್ತಿವೆ. ಹಣವು ನೀರಿನಂತೆ ಹರಿದುಹೋಗುತ್ತಿದೆ. ಈಗಲೂ ಕೆಲವು ರಾಷ್ಟ್ರಗಳಲ್ಲಿ ಹಡಗುಗಳೂ, ಜಹಜುಗಳೂ, ಕಡಲಿನಡಿಯನ್ನು ಸೇರುತ್ತಿವೆ, ವಿಮಾನಗಳು ಜನರನ್ನು ಕೊಂದು ತಾವೂ ನಾಶವಾಗುತ್ತಿವೆ ! ಎಲ್ಲೆಲ್ಲಿ ನೋಡಿದರೂ ಅಪಘಾತಗಳು, ಎಲ್ಲೆಲ್ಲಿ ನೋಡಿದರೂ ದುಃಖದಾರಿದ್ರ್ಯಗಳು, ಎಲ್ಲೆಲ್ಲಿ ನೋಡಿದರೂ ಪ್ರಜಾಕ್ಷೋಭೆ, ಕ್ಷಾಮಡಾಮರಗಳು !

ಪಶ್ಚಿಮದೇಶದವರು ಎಲ್ಲಾ ಸುಖಸಾಮಗ್ರಿಯನ್ನೂ ದೋಚಿಕೊಂಡಿರುವರೆಂದು ಮಿಕ್ಕವರೂ ಅದಕ್ಕಾಗಿ ಹೋರಾಡುತ್ತಿಲ್ಲವೆ ? - ಎಂದರೆ ನಿಜ, ಅವರಲ್ಲಿಯೂ ಮೊದಲಿಗಿಂತ ವಿಷಯಸಂಪತ್ತು ಹೆಚ್ಚಾಗಿರುವದು. ದುಡ್ಡು ಕಡಿಮೆಯಾಯಿತೆಂದು ಕೆಲವರೆನ್ನುವರು, ದುಡ್ಡಿಗೆ ಬೆಲೆ ಕಡಿಮೆಯಾಯಿತೆಂದು ಮತ್ತೆ ಕೆಲವರೆನ್ನುವರು. ಇವೆರಡಕ್ಕೂ ಭೋಗಸಾಮಗ್ರಿಗಳು ಹೆಚ್ಚಿರುವದೇ ಕಾರಣ. ವಿಷಯಗಳ ಸಂಖ್ಯೆ ಹೆಚ್ಚಾಗುತ್ತಾ ಬಂದಹಾಗೆಲ್ಲ ಪಶ್ಚಿಮದೇಶದವರಂತೆ ಮಿಕ್ಕವರಿಗೂ ವಿಷಯದ ತಹತಹವು ಹೆಚ್ಚಾಗುತ್ತಾ ಬಂದಿದೆ. ಅವರು ವಿಷಯಭೋಗವೆಂಬ ಉಪ್ಪುನೀರನ್ನು ಕುಡಿದು ನೀರಡಿಕೆಯನ್ನು ಹೆಚ್ಚಿಸಿಕೊಂಡಿರುತ್ತಾರೆ. ಅವರಿಗೆ ವಿಷಯಭೋಗದ ಅಮಲು ತಲೆಗೇರಿ ಅಧಿಕಾರದಾಶೆ, ರಾಷ್ಟ್ರದ ಆಶೆ, ಸಂಪತ್ತಿನ ಆಶೆ - ಇವೆಲ್ಲವೂ ಹೆಚ್ಚುತ್ತಿರುವವು. ಅವರಿಗೂ ವಿಷಯಸಂಗ್ರಹದ ಹುಚ್ಚು ಹಿಡಿದುಬಿಟ್ಟಿದೆ. ಮದ್ಯವನ್ನು ಕುಡಿದ ಇಬ್ಬರು ಹುಡುಗರು "ಎಲೊ, ಕೂಗಬೇಡ, ಮಾವನು ಎದ್ದಾನು !" ಎಂದು ಕೂಗುತ್ತಾ ಕೂಗುತ್ತಾ ಅಮಲು ಪೂರ ಏರಲಾಗಿ "ಕೂಗಬೇಡ, ಕೂಗಬೇಡ !" ಎಂದೇ

ಗಟ್ಟಿಯಾಗಿ ಕಿರಿಚಿಕೊಂಡು ಮಾವನನ್ನು ಎಚ್ಚಿಸಿಬಿಟ್ಟರಂತೆ ! ಅವರಂತೆ ಪೂರ್ವದೇಶದವರು, ಪಶ್ಚಿಮದೇಶದವರು - ಎಂಬ ಯಾವ ವಿಂಗಡವೂ ಇಲ್ಲದೆ ಎಲ್ಲರಿಗೂ ವಿಷಯದಾಸೆಯು ಹಿಡಿಯದಷ್ಟಾಗಿದೆ. ಅವರು ಭೋಗದ ಮದ್ಯದ ಅಮಲಿನಿಂದ ಬೀದಿವರಿಯುತ್ತಾ ಕಂಡಕಂಡ ಮನೆಗೆ ಬೆಂಕಿಹಾಕುತ್ತಿದ್ದಾರೆ, ಕಂಡಕಂಡ ಪದಾರ್ಥಗಳನ್ನು ಸೂರೆಮಾಡುತ್ತಿದ್ದಾರೆ, ಕಂಡಕಂಡವರನ್ನು ತಲೆಗಡಿಯುತ್ತಿದ್ದಾರೆ. ಇಡೀ ಭೂಮಂಡಲವನ್ನೇ ನರಕವಾಗಿ ಮಾರ್ಪಡಿಸುತ್ತಿದ್ದಾರೆ !

ವಿಷಯಗಳಲ್ಲಿ ಮನಸ್ಸಿಡುತ್ತಲೂ ಮೊದಲು ಅವುಗಳಲ್ಲಿ ರಾಗವುಂಟಾಗಿ ಅವು ತನಗೆ ಬೇಕೆನಿಸುತ್ತದೆ. ಅವು ಸಿಕ್ಕದಿದ್ದರೆ ಸಿಟ್ಟು ಬರುತ್ತದೆ. ಸಿಕ್ಕಿದರೆ ಅವು ತನಗೊಬ್ಬನಿಗೇ ಆಗಬೇಕೆಂದೂ ಮತ್ತೊಬ್ಬರಿಗೂ ಸಿಕ್ಕಕೂಡದೆಂದೂ ದುರಾಶೆಯುಂಟಾಗುತ್ತದೆ. ಆಮೇಲೆ ಈ ವಿಷಯಗಳೇ ಸುಖಕ್ಕೆ ತವರುಮನೆಯಾದ ಅಮೂಲ್ಯವಸ್ತುಗಳೆಂಬ ಭ್ರಾಂತಿ ಹುಟ್ಟುತ್ತದೆ. ಈ ಭ್ರಮೆಯಿಂದ "ಇಂಥ ವಸ್ತುಗಳು ನನ್ನಲ್ಲಿರುವದರಿಂದ ನನಗೇನು ಕಡಿಮೆ ? ಇದು ಮತ್ತೊಬ್ಬರಲ್ಲಿಲ್ಲವೇ ಇಲ್ಲ ; ಅವರು ನನಗೆ ಸರಿಯೆನಿಸಿಯಾರೆ ?" ಎಂಬ ಮದವೇರುತ್ತದೆ. ಈ ದುರ್ಬುದ್ಧಿಯಿರುವವನ ಕಣ್ಣಿಗೆ ಎಲ್ಲಿಯಾದರೂ ಮತ್ತೊಬ್ಬನಲ್ಲಿ ಅದೇ ವಸ್ತುವಿದೆಯೆಂದು ತೋರಿತೊ, ಇಲ್ಲವೊ, ಕೂಡಲೆ ಅವನಮೇಲೆ ಕರುಬತನವುಂಟಾಗಿಬಿಡುತ್ತದೆ. ಹೀಗೆ ಒಂದು ತಪ್ಪು ದಾರಿಯನ್ನು ಹಿಡಿದರೆ ಸರಿ, ಮತ್ತೊಂದಕ್ಕೆ ಅದು ತಾನೇ ಒಯ್ದುಬಿಡುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ - ಎಂಬ ಈ ಆರು ತಪ್ಪುದಾರಿಗಳ ಚಕ್ರಕ್ಕೆ **ಅರಿಷಡ್ವರ್ಗ**ವೆಂದೂ **ಸಂಸಾರ**ವೆಂದೂ ಹೆಸರು. ವಿಷಯಿಗಳು ಈ ಚಕ್ರದಲ್ಲಿಯೇ ತೊಳಲುತ್ತಿರುವರು. "ಹುಟ್ಟಿದೆನು, ಬೆಳೆದೆನು, ಕೃಶವಾದೆನು, ಸೊರಗಿದೆನು, ಸಾಯುವೆನು" - ಎಂದು ಅವರು ಒಂದಾಗುತ್ತಲೊಂದು ಕಲ್ಪನೆಯನ್ನು ಮಾಡಿಕೊಳ್ಳುತ್ತಾ "ಇದಕ್ಕೆ ಈ ವಿಷಯಸಾಮಗ್ರಿಯೇ ಕಾರಣ, ಈ ಸಾಮಗ್ರಿಯು ಸಿಕ್ಕುವದಕ್ಕೆ ಇಂಥವರು ನೆರವಾದರು, ಇಂಥವರು ಇದಕ್ಕೆ ಅಡ್ಡಿಯಾಗಿ ಬಂದರು" ಎಂದುಕೊಳ್ಳುತ್ತಾ ರಾಗದ್ವೇಷಗಳಿಂದ ಹಿಗ್ಗುತ್ತಾ ಕುಗ್ಗುತ್ತಾ ಸಂಕಟಪಡುತ್ತಿರುವರು.

ಆದರೂ **ಮುಮುಕ್ಷು**ಗಳು ಮಾತ್ರ ಹೊರಟಿರುವ ಹೆದ್ದಾರಿಯನ್ನು ಬಿಟ್ಟು

ಒಂದಿಷ್ಟೂ ಅತ್ತಿತ್ತ ಹೆಜ್ಜೆಯನ್ನಿಡುವದೇ ಇಲ್ಲ. ಅವರು ತಮ್ಮ ದಾರಿಯನ್ನು ಶಾಸ್ತ್ರಾಚಾರ್ಯರುಗಳ ಸಹಾಯದಿಂದ ಆರಿಸಿಕೊಂಡಿರುವರು. ಅವರ ಗುರಿಯು ಪರಮಸುಖದಲ್ಲಿಯೇ ಕೇಂದ್ರೀಕೃತವಾಗಿರುವದು. ಆ ಸುಖಸ್ವರೂಪವು ಎಂದೆಂದಿಗೂ ಮಾರ್ಪಡದೆ ಹಿಗ್ಗದೆ, ಕುಗ್ಗದೆ ಅನಂತವಾಗಿ ಅಪರಿಮಿತ ವಾಗಿರುವದು. ಅದನ್ನು 'ಸಚ್ಚಿದಾನಂದ' ವೆಂದೂ ಶಾಸ್ತ್ರಗಳಲ್ಲಿ ಕರೆದಿದೆ. ಆದ್ದರಿಂದ ಸಾಧಕರು ತಾವು ಯಾವ ದಾರಿಯಲ್ಲಿ ನಡೆಯುತ್ತಿದೇವೆಂಬುದರ ಅರಿವನ್ನು ಸಂಪಾದಿಸಿಕೊಂಡು ಕವಲುದಾರಿಗಳನ್ನು ತ್ಯಜಿಸಿ ಹೆದ್ದಾರಿಯ ಕಡೆಗೇ ಲಕ್ಷ್ಯವನ್ನಿಟ್ಟುಕೊಳ್ಳಬೇಕು. ಸೌಖ್ಯದ ಹೆದ್ದಾರಿಯ ಗುರುತುಗಳೇನೆಂಬುದನ್ನು ಇನ್ನು ಮುಂದೆ ವಿಚಾರಮಾಡೋಣ.

☆☆☆☆

# ೪. ಸೌಖ್ಯದ ಹೆದ್ದಾರಿ

**ಶಾನ್ತೋ ದಾನ್ತ ಉಪರತಸ್ತಿತಿಕ್ಷುಃ ಸಮಾಹಿತೋ**
**ಭೂತ್ವಾತ್ಮನ್ಯೇವಾತ್ಮಾನಂ ಪಶ್ಯತಿ ಸರ್ವಮಾತ್ಮಾನಂ ಪಶ್ಯತಿ ||***

**-ಬೃ. ಉ. ೪-೪-೨೩**

ಮುಮುಕ್ಷುಗಳು ನಡೆಯುವ ಹೆದ್ದಾರಿಯಲ್ಲಿ ದಾರಿತಪ್ಪದಂತೆ ಎಚ್ಚರಿಕೆಯನ್ನು ಕೊಡುವ ಯಾವದಾದರೂ ಹೆಗ್ಗುರುತುಗಳಿವೆಯೆ ? ಕಾಮವೇ ಮುಂತಾದ ಆರು ಸೀಳುಹಾದಿಗಳಿಗೆ ಹೋಗದಂತೆ ಯಾವದಾದರೂ ಕೈ ಕಂಬಗಳನ್ನು ದೇವರು ದಾರಿಯಲ್ಲಿ ನೆಡಿಸಿರುವನೆ ?- ಎಂದು ಕೇಳಬಹುದು. ಈ ಹೆದ್ದಾರಿಯಲ್ಲಿ ಆರು ಹೆಗ್ಗುರುತುಗಳಿವೆ. ಇವುಗಳು ಎಲ್ಲರಿಗೂ ಕಾಣುವಂತೆಯೇ ಇದ್ದರೂ ವಿಷಯಿಗಳು ಮಟ್ಟಿಗೆ ಹುಟ್ಟುಕುರುಡರಂತೆ ಇವುಗಳನ್ನು ಲಕ್ಷ್ಯ ಮಾಡದೆ ಕಾಮಾದಿಗಳನ್ನೇ ಅನುಸರಿಸುವರು. ಈ ಕೈಕಂಬಗಳ ಹೆಸರುಗಳು ಯಾವವೆಂದರೆ ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ.

ಶಮದಮಾದಿಗಳ ಪರಿಚಯವಾದವರಿಗೆ ಕಾಮಾದಿಗಳ ಅಂಜಿಕೆಯಿರುವದಿಲ್ಲ. ಶಮವೆಂದರೆ ಮನಸ್ಸನ್ನು ಬಿಗಿಹಿಡಿಯುವದು, ದಮವೆಂದರೆ ಇಂದ್ರಿಯಗಳನ್ನು ಬಿಗಿಹಿಡಿಯುವದು. ಈ ಎರಡರಲ್ಲಿ ದಮಕ್ಕಿಂತಲೂ ಶಮವೇ ಹೆಚ್ಚಿನದೆಂದು ಹೇಳಬೇಕಾದದ್ದೇ ಇಲ್ಲ. ಆದರೂ ಮೊದಮೊದಲು ದಮವನ್ನೇ ಅಭ್ಯಾಸಮಾಡಬೇಕಾಗುವದು. ಏಕೆಂದರೆ ನಮ್ಮಲ್ಲಿ ಬಹುಜನರಿಗೆ ಮನಸ್ಸೆಂಬುದು ಬೇರೆಯಾಗಿರುವದೆಂಬ ಅರಿವು ಇರುವದಿಲ್ಲ, ಮನಸ್ಸೆಂಬುದು ಈಗ ನಮಗೆ ಇಂದ್ರಿಯಗಳ ಮೂಲಕವಾಗಿಯೇ ಅರಿಯಬರುತ್ತದೆ. ಆದ್ದರಿಂದ ಹಾಲನ್ನು ಕಾಯಿಸಬೇಕೆನ್ನುವವರು ಹಾಲಿನ ಪಾತ್ರೆಯನ್ನೇ ಕಾಯಿಸುವ ಹಾಗೆ ನಾವೂ ಮನಸ್ಸನ್ನು ಬಿಗಿಹಿಡಿಯುವದಕ್ಕೆ ಮೊದಲು ಇಂದ್ರಿಯಗಳನ್ನೇ ಹಿಡಿತದಲ್ಲಿಡುವದಕ್ಕೆ ಪ್ರಯತ್ನಮಾಡಬೇಕು. ಹೇಗೆಂದರೆ, ನಿಯಮವಿಲ್ಲದೆ ಆಹಾರ ವಿಹಾರಗಳನ್ನು ಮಾಡುವ ಪದ್ಧತಿಯನ್ನು ಕೈಬಿಡಬೇಕು, ನಡೆನುಡಿಗಳನ್ನು ಕಟ್ಟಿಗ

---

* ಶಮ, ದಮ, ಉಪರತಿ, ತಿತಿಕ್ಷೆ, ಸಮಾಧಾನ - ಇವುಗಳಿಂದ ಕೂಡಿದವನಾಗಿ ತನ್ನಲ್ಲಿಯೇ ಪರಮಾತ್ಮನನ್ನು ಕಂಡುಕೊಳ್ಳುವನು. ಎಲ್ಲವನ್ನೂ ಆತ್ಮನೆಂದೇ ಕಾಣುವನು.

ಒಳಪಡಿಸಿಕೊಳ್ಳಬೇಕು. ರುಚಿಯಾಗಿದೆಯೆಂಬ ಕಾರಣದಿಂದ ಸಿಕ್ಕಿದ ವಸ್ತುವನ್ನು ಎಲ್ಲೆಂದರಲ್ಲಿ ಹೊಟ್ಟೆಯ ಅಳತೆಯನ್ನು ವಿಚಾರಿಸದೆಯೇ ಗಬಗಬನೆ ತಿಂದು ಬಿಡುವ ಚಟವನ್ನು ಬಿಟ್ಟು ಬಿಡಬೇಕು ; ಹಸಿವು ಉಂಟಾಗಿರುವಾಗ ಗೊತ್ತಾದ ವೇಳೆಯಲ್ಲಿ ಶುದ್ಧವಾದ ಆಹಾರವನ್ನೇ ಶುಚಿಯಾಗಿರುವ ಸ್ಥಳದಲ್ಲಿ ಅವಶ್ಯ ವಾದಷ್ಟನ್ನು ನಿಧಾನವಾಗಿ ಮನಸ್ಸಮಾಧಾನದಿಂದ ತೆಗೆದುಕೊಳ್ಳುವ ವಾಡಿಕೆ ಯನ್ನಿಡಬೇಕು. ಹಗಲೆನ್ನದೆ ರಾತ್ರಿಯೆನ್ನದೆ ಸುಪ್ಪತ್ತಿಗೆಯ ಮೇಲೆ ಹೊರಳಾಡುವದಕ್ಕೆಂದು ಮಲಗಿ ಮೈಗಳ್ಳತನವನ್ನು ಕಲಿತುಕೊಳ್ಳದೆ ರಾತ್ರಿಯ ಹೊತ್ತಿನಲ್ಲಿಯೇ ದೇಹಕ್ಕೆ ಸಾಕಾಗುವಷ್ಟು ವಿಶ್ರಾಂತಿಯನ್ನು ಕೊಡುವಂತೆ ಇಂತಿಷ್ಟು ಕಾಲವೆಂದು ಗೊತ್ತುಪಡಿಸಿಕೊಂಡು ನಿದ್ರೆಮಾಡಿ ಮುಂಜಾವದಲ್ಲಿಯೇ ಏಳುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ಆಹಾರದಲ್ಲಿ ಹವಣರಿತು ವರ್ತಿಸುವಾತನಿಗೆ ನಿದ್ರೆಯೂ ವಶದಲ್ಲಿಯೇ ಇರುವದು. ಆಹಾರನಿದ್ರೆಗಳಂತೆ ತಾನು ಮಾಡುವ ಕೆಲಸದಲ್ಲಿಯೂ ಮಿತಿ ಇರಬೇಕು. ತನಗೂ ಲೋಕಕ್ಕೂ ಉಪಯುಕ್ತವಾದ ಕೆಲಸಗಳಲ್ಲಿ ತನ್ನ ಯೋಗ್ಯತೆಯರಿತು ತೊಡಗಬೇಕಲ್ಲದೆ ಗುಡ್ಡ ಕಡಿದು ಮೈಮೇಲೆ ಕೆಡವಿಕೊಳ್ಳುವ ಯೋಚನೆಯನ್ನು ಮಾಡಬಾರದು. ಇದೆಲ್ಲ ದಮವಾಯಿತು.

ಆದರೆ ಹೀಗೆ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿದ್ದರೆ ಸಾಲದು, ಏಕಾದಶಿಯ ದಿನ ಉಪವಾಸವನ್ನು ಮಾಡಿ "ದ್ವಾದಶಿ ಯಾವಾಗ ಬಂದೀತು, ಪಾರಣೆ ಯಾವಾಗ ಆದೀತು ?" ಎಂದು ತವಕಿಸುತ್ತಿರುವದರಿಂದ ಪ್ರಯೋಜನ ವೇನು ? ಉಪವಾಸವನ್ನು ಮಾಡಿ ನಾಲಗೆಗೆ ವಿಷಯದ ಇಚ್ಛೆಯನ್ನು ತಗ್ಗಿಸು ವದಕ್ಕೆ ಬದಲಾಗಿ ಪಾರಣೆಯ ಚಿಂತೆಯಿಂದ ವಿಷಯೇಚ್ಛೆಯೇ ಬಲವಾಗುವದು. ಇದರಂತೆಯೇ ಮಿಕ್ಕ ಇಂದ್ರಿಯಗಳ ವಿಚಾರವನ್ನೂ ತಿಳಿಯಬೇಕು. ಸುಮ್ಮನೆ ಇಂದ್ರಿಯಗಳನ್ನು ತಡೆದುಕೊಂಡು ಒಳಗೇ ವಿಷಯಗಳನ್ನು ಕುರಿತು ಹಂಬಲಿಸು ತ್ತಿರುವವನು **ಮಿಥ್ಯಾಚಾರಿ**ಯೆನಿಸುತ್ತಾನೆ. ಮಿಥ್ಯೆಯೆಂದರೆ ಕಪ್ಪೆಯ ಚಿಪ್ಪಿನ ಬೆಳ್ಳಿ, ಹಗ್ಗದಹಾವು, ಬಿಸಿಲುಕುದುರೆಯ ನೀರು - ಮುಂತಾದವುಗಳಂತಿರುವ ಬರಿಯ ತೋರಿಕೆ. ಯಾವನು ಒಳಗೆ ಮನಸ್ಸಿನಲ್ಲಿ ವಿಷಯಚಿಂತನೆಯನ್ನು ಬೆಳೆಯಿಸಿ ಕೊಂಡು ಹೊರಗೆ ನಿಯಮಗಳನ್ನು ಹೆಚ್ಚಾಗಿ ಪಾಲಿಸುವನೋ ಅವನ ಆಚಾರವು

ಕಪ್ಪೆಯಚಿಪ್ಪಿನ ಬೆಳ್ಳಿಯೇ ಮುಂತಾದವುಗಳಂತೆ ಬರಿಯ ತೋರಿಕೆಯೇ, ಮಿಥ್ಯೆಯೇ ಹೊರತು ಮತ್ತೇನಿಲ್ಲ. ಅಂಥ ಕೆಟ್ಟ ಬಾವುಟವನ್ನು ಎತ್ತಿ ಹಿಡಿಯುವದರಿಂದ ಯಾವ ಪ್ರಯೋಜನವೂ ಇಲ್ಲ. ವಿಷಯೇಚ್ಛೆಯ ಬೇರನ್ನೇ ಕಡಿದುಹಾಕಬೇಕೆಂದಿದ್ದರೆ ಶಮವೆಂಬ ಸಾಧನವೂ ಬೇಕು.

ಶಮವೆಂದರೆ ಮನಸ್ಸನ್ನು ಬಿಗಿಹಿಡಿಯುವದೆಂದರ್ಥ. ಮನಸ್ಸನ್ನು ಬಿಗಿ ಹಿಡಿಯುವದೆಂದರೇನೆಂಬುದನ್ನು ವಿವರಿಸುವದು ಅಷ್ಟು ಸುಲಭವಲ್ಲ. ಇದನ್ನು ತಿಳಿಯುವದಕ್ಕೆ, ವಿಷಯೇಚ್ಛೆಯಾಗುವಾಗ ನಮ್ಮಲ್ಲಿ ಯಾವ ಯಾವ ಮಾರ್ಪಾಟುಗಳು ಆಗುತ್ತಿರುವವೆಂಬುದನ್ನು ಮೊದಲು ತಿಳಿದುಕೊಳ್ಳಬೇಕಾಗು ವದು. ನಮಗೆ ಹೊರಗೆ ಕಾಣುತ್ತಿರುವ ಕಣ್ಣು, ಕಿವಿ - ಮುಂತಾದವುಗಳೇ ನಿಜವಾದ ಇಂದ್ರಿಯಗಳಲ್ಲ ; ಅವು ಇಂದ್ರಿಯಗೋಳಕಗಳು, ಎಂದರೆ ಇಂದ್ರಿಯಗಳು ಕೆಲಸಮಾಡುವ ಸ್ಥಾನವಿಶೇಷಗಳು. ನಿಜವಾದ ಇಂದ್ರಿಯಗಳು ಅವುಗಳಲ್ಲಿ ಒಳಗಿದ್ದುಕೊಂಡು ಕೆಲಸಮಾಡುತ್ತಿರುತ್ತವೆ. ಮೆದುಳಿನಲ್ಲಿ ಬೇರೆಬೇರೆ ಇಂದ್ರಿಯಸ್ಥಾನಗಳಿರುವವೆಂತಲೂ ಆಯಾ ಸ್ಥಾನಗಳಿಂದ ಆಯಾ ಇಂದ್ರಿಯಗೋಳಕಕ್ಕೆ ನರಗಳು ಬಂದು ಸೇರಿಕೊಂಡಿವೆಯೆಂತಲೂ ನರಗಳ ಸಂಬಂಧವಿಲ್ಲದೆ ಚಕ್ಷುಸ್ಸೇ ಮುಂತಾದ ಇಂದ್ರಿಯಗಳು ಕೆಲಸಮಾಡಲಾರ ವೆಂತಲೂ ಈಗಿನ ಶರೀರಶಾಸ್ತ್ರಜ್ಞರು ಹೇಳುತ್ತಾರೆ. ಆಧರೆ ಈ ಸ್ಥಾನಗಳೇ ಇಂದ್ರಿಯಗಳೆಂದು ಭಾವಿಸುವದೂ ಸರಿಯಾಗಿರಲಾರದು ; ಏಕೆಂದರೆ ಕುರುಡರಿಗೆ ಕಣ್ಣಿರುತ್ತದೆ. ಆದರೆ ಅವರಿಗೆ ರೂಪವು ಕಾಣಿಸುವದಿಲ್ಲ. ಈ ಸಂದರ್ಭದಲ್ಲಿ ಕಾಣಿಸದೆ ಇರುವದಕ್ಕೆ ಕಾರಣವೇನು ? ಸ್ಥಾನವೇನೋ ಇದೆ, ಆದರೆ ಅದರಲ್ಲಿರಬೇಕಾದ ಶಕ್ತಿಯಿರುವದಿಲ್ಲ - ಎಂದು ಹೇಳಬೇಕಾಗುವದಲ್ಲವೆ ? ಹೀಗೆ ಇಂದ್ರಿಯಗಳೆಂಬಿವು ಮೆದುಳಿನ ಬೇರೆಬೇರೆ ಭಾಗದಲ್ಲಿದ್ದುಕೊಂಡು ಆಯಾ ಸ್ಥಾನಗಳನ್ನು ತಮ್ಮ ಮೂಲವಾಸವಾಗಿ ಮಾಡಿಕೊಂಡಿರುತ್ತವೆ ಎಂದು ಹೇಳಬಹುದಾಯಿತಷ್ಟೆ. ದೊಡ್ಡಮನುಷ್ಯರುಗಳು ತಮ್ಮ ಮನೆಗೆ ಟೆಲಿಫೋನಿನ ಸಂಬಂಧವನ್ನು ಇಟ್ಟುಕೊಂಡಿರುವಂತೆ ಅವು ಅಲ್ಲಿಂದ ಹೊರಗಿನ ಗೋಳಕ ಗಳವರೆಗೆ ನರಗಳ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಈ ರೀತಿಯಲ್ಲಿ ಇಂದ್ರಿಯಗಳು ಹೊರಗಿನ ಸಂಬಂಧದಿಂದ ವಿಷಯಗಳನ್ನು ಅರಿತು ಮನಸ್ಸಿಗೆ

ಅರ್ಪಿಸಿಬಿಡುತ್ತವೆ. ನರಗಳ ಸ್ಥಾನಗಳೇ ಹೇಗೆ ಇಂದ್ರಿಯಗಳಲ್ಲವೋ ಹಾಗೆ ಮೆದುಳೇ ಮನಸ್ಸಲ್ಲ ; ಅದರ ಒಳಗೆ ಮನಸ್ಸು ಕೆಲಸಮಾಡುತ್ತಿರುತ್ತದೆ. ಸರಿಯಾಗಿ ನೋಡಿದರೆ ಮನಸ್ಸಿಗೆ ನಿಜವಾಗಿ ಸ್ಥಾನ ಪರಿಚ್ಛೇದವಿಲ್ಲ ; ಅದು ದೊಡ್ಡದು, ಸಣ್ಣದು ಎಂದು ಮುಂತಾಗಿ ಅದಕ್ಕೆ ಪರಿಮಾಣವನ್ನಾಗಲಿ ಅದು ಇಂತಿಷ್ಟು ಸ್ಥಳವನ್ನು ಆಕ್ರಮಿಸಿರುವದೆಂದಾಗಲಿ ಹೇಳುವದೂ ಸರಿಯಲ್ಲ. ಆದ್ದರಿಂದ ಮನಸ್ಸು ಇಂಥ ಕಡೆಯಲ್ಲಿರುವದೆಂಬುದೂ ಉಪಚಾರದ ಮಾತೇ ಆಗುತ್ತದೆ. ಆದರೂ ಮನಸ್ಸಿನ ಕಾರ್ಯವು ಎಲ್ಲಿ ತೋರಿಕೊಳ್ಳುವದೋ ಅಲ್ಲಿ ಅದು ಇದೆ ಎಂದು ಸಾಮಾನ್ಯವಾಗಿ ಆಡಿಕೊಳ್ಳುತ್ತಾರೆ. ಆದ್ದರಿಂದಲೇ ಪೂರ್ವಿಕರು ಮನಸ್ಸು ಹೃದಯದಲ್ಲಿರುವದೆಂದು ಹೇಳುತ್ತಿದ್ದರು, ಈಚಿನವರು ಅದು ಮೆದುಳಿನಲ್ಲಿದೆ ಎನ್ನುತ್ತಿದ್ದಾರೆ. ಇದು ಹೇಗಾದರೂ ಇರಲಿ. ವಿಷಯವನ್ನು ಇಂದ್ರಿಯಗಳು ಗ್ರಹಿಸಿ ಮನಸ್ಸಿಗೆ ಕೊಟ್ಟಾಗ ನಮಗೆ ವಿಷಯದರಿವಾಗುತ್ತದೆ ಎಂಬುದೇ ಇಲ್ಲಿ ಪ್ರಕೃತವಾಗಿರುತ್ತದೆ.

ಮನಸ್ಸಿನಲ್ಲಿ ವಿಷಯದರಿವು ಆಗುವದಕ್ಕೆ ಮೊದಲೇ ಹಿಂದಿನ ವಿಷಯಾನುಭವದಿಂದ ಆಗಿದ್ದ ಸುಖದ ಸಂಸ್ಕಾರವು ಇದ್ದುಕೊಂಡಿರುತ್ತದೆ. ಆ ಬೀಜರೂಪವಾದ ಸಂಸ್ಕಾರವು ಹೊರತೋರಿಕೊಂಡು ನೆಗೆದಾಡುವದೇ ವಿಷಯೇಚ್ಛೆ. ಅಂತೂ ವಿಷಯಗಳ ಅರಿವನ್ನು ಇಂದ್ರಿಯಗಳು ತಂದುಕೊಟ್ಟಾಗ ಮನಸ್ಸು ತನ್ನೊಳಗಿದ್ದ ವಿಷಯವಾಸನೆಯನ್ನು ಹೊರಗೆಡುವುತ್ತದೆ ಎಂದಾಯಿತು. ಆದ್ದರಿಂದ ವಿಷಯೇಚ್ಛೆಯು ನಮಗೆ ಆಗದೆ ಇರುವದಕ್ಕೆ ಮನಸ್ಸು ಹೊರಬೀಳದಂತೆ ಮಾಡುವದು ಮುಖ್ಯವಾಯಿತು. ಮನಸ್ಸು ಹೊರಮುಖವಾಗದಿದ್ದರೆ ಇಂದ್ರಿಯಜ್ಞಾನಗಳು ಅದಕ್ಕೇನೂ ಮಾಡಲೇ ಆರವು. ಋಷ್ಯಶೃಂಗನನ್ನು ವೇಶ್ಯೆಯರುಕೂಡ ತಮ್ಮ ವಿಲಾಸಗಳಿಂದ ವಶಪಡಿಸಿಕೊಳ್ಳಲಾರದೆ ಹೋದರೆಂದು ಪುರಾಣದಲ್ಲಿದೆಯಷ್ಟೆ. ಇದಕ್ಕೆ ಆತನ ಮನಸ್ಸಿನಲ್ಲಿ ವಿಷಯವಾಸನೆಯಿಲ್ಲದಿದ್ದದ್ದೇ ಕಾರಣ. ಆದ್ದರಿಂದ ಮುಖ್ಯವಾಗಿ ಮನಸ್ಸು ಹೊರಮುಖವಾಗದಂತೆ, ಎಂದರೆ ವಿಷಯಗಳ ಚಿಂತೆಯನ್ನು ಹತ್ತಿಸಿಕೊಳ್ಳದಂತೆ, ಮಾಡಬೇಕು. ವಿಷಯಗಳ ಚಿಂತೆಯೆಂದರೆ ವಿಷಯಗಳು ಬೇಕೆಂಬ ಯೋಚನೆಯೆಂದರ್ಥವಲ್ಲ. ಅವು ಬೇಕೆಂದಾಗಲಿ, ಬೇಡವೆಂದಾಗಲಿ, ಯಾವ ಯೋಚನೆ

ಯೂ ಇರಕೂಡದು. ಇದೇ ಶಮವು. ಶಮದಮಗಳು ಯಾರಿಗೆ ಆಳವಟ್ಟಿರುವವೋ ಅವರಿಗೆ ಕಾಮಕ್ರೋಧಗಳ ಉಪಟಳವಿರುವದಿಲ್ಲ.

ಹೀಗೆಯೇ ಲೋಭಮೋಹಗಳನ್ನು ಉಪರತಿ - ತಿತಿಕ್ಷೆಗಳಿಂದ ಗೆಲ್ಲಬೇಕು. ಉಪರತಿಯೆಂದರೆ ಹಣಕಾಸು, ಹೆಂಡಿರು ಮಕ್ಕಳು - ಮೊದಲಾದ ಆಸೆಯನ್ನೆಲ್ಲ ತೊರೆದು ಆ ಸಂಬಂಧದ ಕರ್ಮಗಳನ್ನು ಸಾಕುಮಾಡುವದು. ನಿಜವಾಗಿ ನೋಡಿದರೆ ಶಮದಮಗಳು ಆಳವಟ್ಟವನಿಗೆ ಯಾವ ವಿಷಯೇಚ್ಛೆಯೂ ಇರುವದಕ್ಕೆ ಕಾರಣವಿರುವದಿಲ್ಲ. ವಿಷಯೇಚ್ಛೆಯಿಲ್ಲದವನಿಗೆ ವಿಷಯಗಳನ್ನು ಸಂಪಾದಿಸಬೇಕೆಂಬುದರಲ್ಲಿ ಯತ್ನಗೌರವವುಂಟಾಗಲೂ ಆರದು. ಆದರೂ ಕಾಮವು ಸರ್ವಥಾ ಹೋಗಿಬಿಡುವದೆಂಬುದು ಸಾಮಾನ್ಯರಿಗೆ ಅಸಂಭವವಾದದ್ದು. ಅದರಂತೆ ವ್ಯವಹಾರಗಳನ್ನೆಲ್ಲ ಕೈಸಾರಿಬಿಡುವದೆಂಬುದೂ ಆಗದ ಕೆಲಸವೇ. ಏಕೆಂದರೆ ಕಾಮವಿರುವವರೆಗೆ ಯಾವದಾದರೊಂದು ಕರ್ಮವನ್ನು ಮಾಡಿಯೇತೀರಬೇಕಾಗುವದು. ಪುಣ್ಯಕರ್ಮವಾಗಲಿ ಪಾಪಕರ್ಮವಾಗಲಿ ಕಾಮವಿಲ್ಲದೆ ಆಗುವದಿಲ್ಲ. ಆದರೂ ಮುಮುಕ್ಷುವಾದವನು ತನ್ನ ಕೈಲಾದ ಮಟ್ಟಿಗಾದರೂ ಕರ್ಮಗಳನ್ನೂ ಅವುಗಳ ಫಲದ ಹಾರೈಕೆಯನ್ನೂ ದೂರ ಮಾಡಬೇಕು. ತಾನು ಮಾಡಿಯೇತೀರಬೇಕಾದಷ್ಟು ಕಾರ್ಯಗಳನ್ನು ಉತ್ತಮ ರೀತಿಯಿಂದ ಮಾಡಿ ಫಲಾಸಕ್ತಿಯಿಲ್ಲದಿರುವದಕ್ಕೆ ಯತ್ನಿಸುತ್ತಿರಬೇಕು. ವಿಷಯಗಳ ಚಿಂತೆಯು ಹೇಗೆ ಮನಸ್ಸಿಗೆ ಹತ್ತಕೂಡದೋ ಹಾಗೆಯೇ ಕರ್ಮದ ಚಿಂತೆಯೂ ಅದಕ್ಕೆ ತಗಲಕೂಡದು ಇದೇ ಉತ್ತಮವಾದ ಉಪರತಿಯು. ತಾನು ಮಾಡುತ್ತೇನೆಂಬ ಹಮ್ಮು ಇಲ್ಲದೆ ಜನಕಾದಿಗಳಂತೆ ರಾಜ್ಯಭಾರವನ್ನೇ ಮಾಡುತ್ತಿದ್ದರೂ ಉಪರತಿಯೇ ಆಗುವದು : ಅಂಥ ಹಮ್ಮು ಇರುವಾತನು ಏನೇನೂ ಮಾಡದೆ ಅಜಗರನ ಹಾಗೆ ಸುಮ್ಮನೆ ಮಲಗಿಕೊಂಡಿದ್ದರೂ ಎಲ್ಲಾ ಕರ್ಮಗಳನ್ನೂ ಮಾಡಿದಂತಾಯಿತು. ಈ ಮರ್ಮವನ್ನರಿತು ಉಪರತಿಯನ್ನು ಅಭ್ಯಾಸಮಾಡಿದರೆ ಲೋಭವೆಂಬ ದೋಷವು ನಿವೃತ್ತಿಯಾಗುವದು.

ತಿತಿಕ್ಷೆ ಎಂದರೆ ದ್ವಂದ್ವಗಳನ್ನು ಸಹಿಸಿಕೊಳ್ಳುವದು. ಇದು ಸುಖಕ್ಕೆ ಕಾರಣವಾದದ್ದು, ಇಂಥಿಂಥ ವಸ್ತುಗಳು ಇಷ್ಟಿಷ್ಟಾದರೆ ಸುಖವುಂಟಾಗುವದೆಂದೂ ಇವುಗಳು ಹೆಚ್ಚಿದಷ್ಟೂ ಸುಖವೂ ಹೆಚ್ಚುವದೆಂದೂ ಜನರ

ಭಾವನೆಯಿರುತ್ತದೆ. ಮತ್ತೆ ಕೆಲವು ವಸ್ತುಗಳು ದುಃಖಕ್ಕೆ ಕಾರಣವೆಂದೂ ಅವು ಹೆಚ್ಚು ಹೆಚ್ಚಾಗಿ ಬಂದು ಸೇರಿದಷ್ಟೂ ದುಃಖವೂ ಹೆಚ್ಚುವದೆಂದೂ ಅವರ ಭಾವನೆಯಿರುತ್ತದೆ. ಸುಖವು ಅವರಿಗೆ ಬೇಕಾಗಿದೆ, ದುಃಖವು ಬೇಡವಾಗಿದೆ. ಆದ್ದರಿಂದ ಸುಖಸಾಮಗ್ರಿಯೆಂದು ತಾವು ಎಣಿಸಿರುವ ಪದಾರ್ಥಗಳಲ್ಲಿ ಅವರಿಗೆ ರಾಗವುಂಟಾಗುವದು. ಹೀಗೆ ವಸ್ತುಗಳಲ್ಲಿ ಉಂಟಾಗುವ ರಾಗದ್ವೇಷಗಳೂ ಅವುಗಳಿಂದುಂಟಾಗುವ ಲಾಭ ನಷ್ಟ, ಶೀತ ಉಷ್ಣ, ಸುಖ ದುಃಖ - ಮುಂತಾದವುಗಳೂ ಒಂದಕ್ಕೊಂದು ವಿರುದ್ಧವಾಗಿರುವ ಎರಡೆರಡರ ಜೋಡಿಯಾಗಿಯೇ ಬರುತ್ತಿರುವದರಿಂದ ಆ ಜೋಡಿಗಳಿಗೆ ದ್ವಂದ್ವಗಳೆಂದು ಹೆಸರು. ವಿವೇಕಿಯಾದವನು ಈ ದ್ವಂದ್ವಗಳ ಸ್ವರೂಪವನ್ನು ಚೆನ್ನಾಗಿ ವಿಂಗಡಿಸಿಕೊಂಡು ನೋಡಿ ದ್ವಂದ್ವಗಳ ಹೊಡೆತದಿಂದ ತಪ್ಪಿಸಿಕೊಳ್ಳಬೇಕು ಎಂದರೆ ಅವುಗಳನ್ನು ಹಿಗ್ಗದೆ ತಗ್ಗದೆ ತಾಳ್ಮೆಯಿಂದ ಸಹಿಸಿಕೊಳ್ಳುವದನ್ನು ಅಭ್ಯಾಸಮಾಡಬೇಕು. ಸರಿಯಾಗಿ ನೋಡಿದರೆ ಯಾವದಾದರೊಂದು ವಿಷಯವು ಗೊತ್ತಾಗಿ ಸುಖಕ್ಕೇ ಅಥವಾ ದುಃಖಕ್ಕೇ ಕಾರಣವಾಗಿರುವದೆಂಬುದು ಬಯಲಭ್ರಾಂತಿ. ಏಕೆಂದರೆ ಒಂದೇ ಪದಾರ್ಥದಿಂದ ಕಾಲಭೇದದಿಂದ ಸುಖವೂ ದುಃಖವೂ ಆಗುತ್ತಿರುವವು. ಉದಾಹರಣೆಗೆ ಉಣ್ಣೆಯ ಬಟ್ಟೆಯಿಂದ ಚಳಿಗಾಲದಲ್ಲಿ ಸುಖವೂ ಬೇಸಗೆಯಲ್ಲಿ ದುಃಖವೂ ಆಗುವದು. ಇದಲ್ಲದೆ ಒಂದೇ ಪದಾರ್ಥದಿಂದ ಒಬ್ಬನಿಗೆ ದುಃಖವೂ ಮತ್ತೊಬ್ಬನಿಗೆ ಸುಖವೂ ಆಗುವವು. ಹೇಗೆಂದರೆ ಯುದ್ಧಕಾಲದಲ್ಲಿ ಭೇರಿಯ ಧ್ವನಿಯನ್ನು ಕೇಳಿದರೆ ಕರ್ಣಾರ್ಜುನರಂಥ ವೀರರಿಗೆ ಮೈಯುಬ್ಬುವದು, ಸಂತೋಷವಾಗುವದು ; ಆದರೆ ಉತ್ತರನಂಥ ಹೇಡಿಗಳಿಗೆ ಮೈಕೈ ನಡುಗಹತ್ತಿ ಅತ್ಯಂತ ವ್ಯಥೆಯಾಗುವದು. ಮತ್ತೊಂದು ವಿಚಾರ ; ಈ ಪದಾರ್ಥದಿಂದ ಇಷ್ಟೇ ಸುಖವು ಅಥವಾ ಇಷ್ಟೇ ದುಃಖವು ಆಗುವದೆಂಬ ಅಳತೆಯೂ ಇರುವದಿಲ್ಲ. ಸಕ್ಕರೆಯನ್ನು ತಿಂದರೆ ಇಂತಿಷ್ಟೇ ಸುಖವೆಂದೂ ಚೇಳು ಕಚ್ಚಿದರೆ ಇಂತಿಷ್ಟೇ ವ್ಯಥೆಯೆಂದೂ ನಿಯಮವನ್ನು ಮಾಡುವದಕ್ಕಾದೀತೇನು ? ಎಂದಿಗೂ ಇಲ್ಲ. ಇದು ಅವರವರ ಮನೋದಾರ್ಢ್ಯವನ್ನು ಅವಲಂಬಿಸಿರುತ್ತದೆ. ಚಳಿಗಾಳಿಗಳನ್ನಾಗಲಿ ಸೆಕೆಯನ್ನಾಗಲಿ ತಡೆದುಕೊಳ್ಳಬಲ್ಲ ಬೈರಾಗಿಗಳಂಥವರು ಬರಿಯ ಮೈಯಲ್ಲಿಯೇ ಸರ್ವಕಾಲದಲ್ಲಿಯೂ ಇರಬಲ್ಲರು ; ಕೈಯಲ್ಲಿ ಸಾಗದವರು

ಮಂಗಳಾರತಿಗೆ ಉಷ್ಣ, ತೀರ್ಥಕ್ಕೆ ಶೀತ - ಎಂದು ಅಂಜಿ ಸಾಯುವರು. ಹೀಗೆ ನೋಡಿದರೆ ವಿಷಯಗಳಿಗೂ ಸುಖದುಃಖಗಳಿಗೂ ನಿಯತವಾದ ಯಾವ ಕಾರ್ಯಕಾರಣಸಂಬಂಧವೂ ಇರುವದಿಲ್ಲ. ಆದ್ದರಿಂದಲೇ ಭಗವಂತನು "ಅಯ್ಯ ಕುಂತೀಪುತ್ರನೆ, ವಿಷಯಗಳ ಸೋಂಕಿನಿಂದ ಶೀತೋಷ್ಣಗಳೂ ಸುಖದುಃಖಗಳೂ ಬಂದುಹೋಗುತ್ತಿರುವವು ; ಅವು ಅನಿತ್ಯವಾಗಿರುವದರಿಂದ ಅವುಗಳನ್ನು ತಡೆದುಕೊ" ಎಂದು ಅರ್ಜುನನಿಗೆ ಉಪದೇಶಮಾಡಿರುತ್ತಾನೆ. ಮೋಹಾವಿಷ್ಟ ರಾದವರು "ವಿಷಯಗಳನ್ನು ಹೀಗೆ ಹೀಗೆ ಜೋಡಿಸಿಟ್ಟುಕೊಂಡರೆ ನಮಗೆ ಸುಖವಾಗುವದು, ದುಃಖ ತೊಲಗುವದು" ಎಂದು ಭಾವಿಸಿಕೊಳ್ಳುತ್ತಾರೆ. ಸರಿಯಾಗಿ ನೋಡಿದರೆ ವಿಷಯಸುಖಗಳೆಂಬವು ಹಗ್ಗದಲ್ಲಿ ತೋರುವ ಹಾವಿನಂತೆಯೂ ಕಪ್ಪೆಯಚಿಪ್ಪಿನಲ್ಲಿ ತೋರುವ ಬೆಳ್ಳಿಯಂತೆಯೂ ತೋರಿ ಹಾರುವ ಮಾಯೆ ಎಂಬುದನ್ನು ಅವರು ಅರಿಯರು. ಸುಖದಮೇಲೆ ದುಃಖವೂ ದುಃಖದಮೇಲೆ ಸುಖವೂ ತೋರುವದು ಈ ಪ್ರಪಂಚದ ಸ್ವಭಾವವು. ಸುಖವಾಗಲಿ ದುಃಖವಾಗಲಿ ಎಂದಿಗೂ ನಿತ್ಯವಾಗಿ ನಿಲ್ಲುವದಿಲ್ಲ. ವಿಷಯ ಗಳಿಗೂ ಅವುಗಳಿಂದಾಗುವದೆಂಬ ಸುಖದುಃಖಾದಿಗಳಿಗೂ ನಿಜವಾದ ಕಾರ್ಯ ಕಾರಣಭಾವವಿಲ್ಲವೇ ಇಲ್ಲ. ಇದನ್ನು ಅರಿತು ಅನಿತ್ಯವಾದ ಈ ಸುಖದುಃಖ ಗಳನ್ನು ಯಾರು ಸಮಬುದ್ಧಿಯಿಂದ ತಡೆದುಕೊಳ್ಳುವರೋ ಅವರೇ ಧೀರರು, ಅವರೇ ಅಮೃತತ್ವಕ್ಕೆ - ಎಂದರೆ ಸಾವಿಲ್ಲದ ಸೌಖ್ಯಕ್ಕೆ - ತಕ್ಕವರು ಎಂದು ಕೃಷ್ಣಭಗವಂತನು ಹೇಳಿರುತ್ತಾನೆ.

ಶ್ರದ್ಧೆಯೆಂಬುದು ಸೌಖ್ಯದ ಹೆದ್ದಾರಿಯಲ್ಲಿರುವ ಬಲು ಮುಖ್ಯವಾದ ಹೆಗ್ಗುರುತು. ಇದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಮದವೆಂಬ ಸೀಳುದಾರಿಗೆ ಬೀಳುವದು ತಪ್ಪುತ್ತದೆ. ಎಷ್ಟೋ ಜನರಿಗೆ ಪರಲೋಕವೆಂದರೆ ಅದರಲ್ಲಿ ನಂಬಿಕೆಯಾಗುವದಿಲ್ಲ. ಗುರುಶಾಸ್ತ್ರಗಳ ವಾಕ್ಯವೆಂದರೆ ಆದರವುಂಟಾಗುವದಿಲ್ಲ. ಅವರು ವಿಷಯಗಳ ಸೇವೆಯೆಂಬ ಮದ್ಯದಿಂದ ಮೈಮರೆತು ಸಂಸಾರದಲ್ಲಿ ಮುಳುಗಿರುವರು. ಅವರಿಗೆ ಅಧ್ಯಾತ್ಮಚಿಂತನೆಯೆಂದರೆ ತುಂಬ ಅಂಜಿಕೆ. ಅಧ್ಯಾತ್ಮವಿಚಾರವೆಂದರೆ ಮನೆಮಠಗಳನ್ನು ಬಿಟ್ಟು, ಮೈಗೆಲ್ಲ ಬೂದಿಯನ್ನು ಬಳಿದುಕೊಂಡು, ಕಾಡುಮೇಡುಗಳನ್ನು ಸೇರಿ ಮೂಗು ಹಿಡಿದುಕೊಂಡು

ಕೂತಿರುವದೆಂದೇ ಅವರ ಭಾವನೆ ! "ಇಂದ್ರಿಯಗಳನ್ನು ಜಯಿಸಿರುವ ದೆಂದರೇನು ? ಯಾರೋ ಜಯಿಸಿಕೊಂಡಿದ್ದರೆಂದು ಹೊಟ್ಟೆಗಿಲ್ಲದವರೂ ವಿಷಯಗಳನ್ನನುಭವಿಸಿ ಸಂತೋಷಪಡುವ ಯೋಗ್ಯತೆಯಿಲ್ಲದವರೂ ಪುರಾಣ ಗಳಲ್ಲಿ ಬರೆದಿಟ್ಟ ಮಾತುಗಳೇ ಪ್ರಮಾಣವೆ ? ಇಂದ್ರಿಯಗಳನ್ನು ಜಯಿಸುವ ದೆಂಬುದು ಯಾರಿಂದಲೂ ಆಗದ ಮಾತೇ ಸರಿ. ಅಥವಾ ಅವುಗಳನ್ನು ಜಯಿಸಲೇಬೇಕೆಂದು ಹುಚ್ಚಿನಿಂದ ಹಠಹಿಡಿಯುವದಾದರೂ ಏಕೆ ! ವಿಷಯ ಗಳನ್ನು ಉಪಭೋಗಿಸುವದಕ್ಕಿಲ್ಲದಿದ್ದರೆ ಇಂದ್ರಿಯಗಳಿರುವದಾದರೂ ಏತಕ್ಕೆ ? ಇದೂ ಅಲ್ಲದೆ ವಿಷಯಗಳನ್ನು ಬಿಟ್ಟು ತಾನೆ ಮತ್ತೆ ಯಾವ ಸೌಖ್ಯವನ್ನು ಸುರಿದುಕೊಳ್ಳಬೇಕು ?" ಎಂದು ಅವರು ತಮ್ಮ ತಮ್ಮೊಳಗೆ ಆಡಿಕೊಳ್ಳು ತ್ತಿರುವರು. ಉತ್ತರಧ್ರುವಪ್ರದೇಶವನ್ನು ಮುಟ್ಟಲಾರದವರು ತಾವಿರುವದೇ ಉತ್ತರಧ್ರುವವೆನ್ನುವಂತೆಯೂ ಗೌರೀಶಂಕರವನ್ನು ಏರಲಾದವರು ಅಷ್ಟು ಎತ್ತರಕ್ಕೆ ಹೋಗಿ ಪಡೆಯತಕ್ಕದ್ದೇನೆಂದು ಆಕ್ಷೇಪಿಸುವಂತೆಯೂ ಅಲ್ಪತೃಪ್ತಿ ಯವರಾಗಿ ದ್ರಾಕ್ಷಿಯ ಹಣ್ಣನ್ನು ಹುಳಿಯೆಂದು ಹಳಿದ ನರಿಯ ವೈರಾಗ್ಯವನ್ನು ಹೊಂದಿರುವ ಈ ಬಗೆಯ ಜನರಿಗೆ ವಿಷಯಗಳೇ ಸ್ವರ್ಗ, ವಿಷಯಗಳೇ ನರಕ. ಕೆಸರಿನಲ್ಲಿ ಬಿದ್ದು ಒದ್ದಾಡುವ ಹುಳುಗಳಂತೆ ಅವರು ವಿಷಯಗಳಲ್ಲಿಯೇ ಇದ್ದುಕೊಂಡು ಅವುಗಳ ಸಂಬಂಧವನ್ನೇ ಹೇಗೋ ಒಗ್ಗಿಸಿಕೊಂಡಿರ ಬೇಕಾಗಿರುವದು. ಆದರೆ "ನಿತ್ಯನಿರತಿಶಯಸೌಖ್ಯವೆಂಬುದು ನಿಜವಾಗಿಯೂ ಇದೆ. ಅದನ್ನು ಪಡೆಯುವ ಕ್ರಮವನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ. ಹಿಂದೆ ಎಷ್ಟೋ ಜನರು ಆ ಸೌಖ್ಯವನ್ನು ಪಡೆದಿದ್ದಾರೆ ; ಈಗ ಪ್ರಯತ್ನಪಟ್ಟರೆ ಸದ್ಗುರುವಿನ ದಯೆಯಿಂದಲೂ ಈಶ್ವರಾನುಗ್ರಹದಿಂದಲೂ ನಾವೂ ಈ ದುಃಖದಿಂದ ಪಾರಾಗಿ ಅಂಥ ಸುಖವನ್ನು ಪಡೆದುಕೊಳ್ಳಬಹುದು" ಎಂದು ಪೂರ್ಣಶ್ರದ್ಧೆಯಿಂದ ಯಾರು ಪ್ರಯತ್ನಪಡುವರೋ ಅವರಿಗೆ ಯಾವ ಸೀಳುಹಾದಿಗೂ ಹೋಗದೆ ಈ ಸೌಖ್ಯದ ಹೆದ್ದಾರಿಯಲ್ಲಿಯೇ ಮುನ್ನಡೆಯುವ ಕೆಚ್ಚೆದೆಯು ಬರುವದು.

**ಸಮಾಧಿ**ಯೆಂಬುದು ಈ ಮಾರ್ಗದ ಆರನೆಯ ಹೆಗ್ಗುರುತು. ಸಮಾಧಿ ಯಿಂದ ಮಾತ್ಸರ್ಯವೆಂಬ ದೋಷವು ಬಿಡುಗಡೆಯಾಗುವುದು, "ಇಂಥವ

ನೊಬ್ಬನಿಗೆ ಈ ವಿಷಯವು ಸಿಕ್ಕಿತಲ್ಲ ! ಇಂಥವನೊಬ್ಬನ ತಿಳಿವು ಇಷ್ಟುಮಟ್ಟಿಗೆ ಇದೆಯಲ್ಲ ! ಇಂಥವನಲ್ಲಿ ಜನರಿಗೆಲ್ಲ ಹೆಚ್ಚಿನ ಗೌರವವಿದೆಯಲ್ಲ !'' ಎಂದು ಕರುಬುವದೇ **ಮಾತ್ಸರ್ಯವು**. ಇದು ತಾನು, ಮತ್ತೊಬ್ಬರು ಎಂಬ ಭೇದವನ್ನು ಒತ್ತಿ ಲಕ್ಷ್ಯದಲ್ಲಿಡುವದರಿಂದಾಗುವ ದೋಷವು. ಯಾವನಲ್ಲಿ ಮಾತ್ಸರ್ಯವೆಂಬ ದೋಷವು ಎಡೆಮಾಡಿಕೊಂಡಿರುವದೋ ಅವನು ಸದ್ಗುಣವುಳ್ಳವರಲ್ಲಿಯೂ ದೋಷವನ್ನು ಆರೋಪಿಸುವದೆಂಬ ಅಸೂಯೆಗೂ ಪಕ್ಕಾಗುವನು. ಆದರೆ ''ಎಲ್ಲರಲ್ಲಿಯೂ ಪ್ರೀತಿಯಿಡುವದೇ ನನ್ನ ಕರ್ತವ್ಯವು, ಹಾಗೆಮಾಡದಿರುವದರಿಂದಲೇ ನನ್ನ ಮನಸ್ಸಿನಲ್ಲಿ ತಳಮಳದ ವೃತ್ತಿಗಳು ಏಳುತ್ತಿರುವವು'' ಎಂದು ಯಾವಾಗ ಆ ಶುಭಕಾರ್ಯಕ್ಕೆ ಕೈಹಾಕುವೆವೋ ಕೂಡಲೆ **''ಸಮಾಧಿ''** ಎಂಬ ವೃತ್ತಿಯು ಮನಸ್ಸಿನಲ್ಲಿ ಮೈದೋರುವದು. ಲಾಭ, ನಷ್ಟ, ಜಯ, ಅಪಜಯ ಇವೆಲ್ಲ ನಡುವೆ ಬಂದುಹೋಗುವ ಕೆಟ್ಟಕನಸುಗಳು, ಇವುಗಳಿಂದ ತನ್ನ ಮನಸ್ಸಿನ ನಿಲುಗಡೆಯನ್ನು ಕೆಡಿಸಿಕೊಳ್ಳುವವನು ಮೂರ್ಖನು. ಮನಸ್ಸೊಂದು ಏರುಪೇರುಗಳಿಲ್ಲದೆ ಇತ್ತೆಂದರೆ ಜಗತ್ತೇ ಉಲ್ಲೋಲಕಲ್ಲೋಲವಾದರೂ ನಮಗೆ ಏನೂ ಆಗಲಾರದು. ನಮಗೆ ದುಃಖವೋ, ಹೆದರಿಕೆಯೋ, ಅವಮಾನವೋ ಆದರೆ ''ಇದು ಯಾರಿಂದಾಯಿತು ?'' ಎಂದು ಹೊರಗೆ ಅದರ ಕಾರಣವನ್ನು ಹುಡುಕುವದಕ್ಕೆ ಹೋಗಬಾರದು. ''ಈ ಏರುಪೇರು ನನ್ನ ಮನಸ್ಸಿನಲ್ಲಿ ಏಕೆ ಹುಟ್ಟಿತು ? ನಾನು ನನ್ನ ಸಮಾಧಾನವನ್ನು ಏಕೆ ಕಳೆದುಕೊಂಡೆನು ?'' ಎಂದು ತನ್ನನ್ನು ತಾನೇ ಪರೀಕ್ಷಿಸಿಕೊಳ್ಳಬೇಕು. ''ಈಗ ಜನರಿಗೆ ನನ್ನ ಯೋಗ್ಯತೆ ತಿಳಿಯಿತು ; ಈಗ ಅವರಿಗೆ ನನ್ನ ಮಾತಿನ ಬೆಲೆ ಗೊತ್ತಾಯಿತು'' ಎಂದು ಉಬ್ಬೇರುವದಕ್ಕೆ ಬದಲು ''ನಾನು ನನ್ನ ಮಾತಿಗೇ ಹೆಚ್ಚಿನ ಬೆಲೆಕಟ್ಟುತ್ತಿದೇನೆಯೊ, ಹೇಗೆ ? ಜನರು ನನ್ನಲ್ಲಿಲ್ಲದ ಅಭಿಮಾನವನ್ನು ತೋರಿಸಿದರೆ ಅದೇ ನಿಜವೆಂದು ಮೋಸಹೋದೆನೊ, ಏನು ?'' ಎಂದು ಯೋಚಿಸಿಕೊಳ್ಳುತ್ತಾ ಮನಸ್ಸಿನ ತಕ್ಕಡಿಯನ್ನು ನಿಲುಗಡೆಗೆ ತಂದುಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಬೇಕು.

''ಹೀಗೆಲ್ಲ ಸಾಧನವನ್ನು ಮಾಡುತ್ತಾ ಕೂತುಕೊಂಡರೆ ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುವವರು ಯಾರು ? ವ್ಯವಹಾರಚತುರರಾದವರು

ನಮಗೆ ಮೋಸಮಾಡದೆ ಬಿಟ್ಟಾರೆ ?'' ಎಂದು ಎಂದಿಗೂ ಯೋಚಿಸ ಬೇಕಾದದ್ದಿಲ್ಲ. ಅಧ್ಯಾತ್ಮಚಿಂತನೆಯಿಂದ ಪರಮಶಾಂತಿಯನ್ನು ಹೊಂದುವದಕ್ಕೆ ಯತ್ನಿಸಲಿ - ಎಂದೇ ಮಾನವವರ್ಗವನ್ನು ಪರಮೇಶ್ವರನು ಹುಟ್ಟಿಸಿರುತ್ತಾನೆ. ನಿಜವಾದ ಶ್ರದ್ಧೆಯಿಂದ ಆತನಲ್ಲಿಯೇ ಮನಸ್ಸನ್ನಿಟ್ಟವರಾಗಿ ಸಾಧನಮಾಡುತ್ತಾ ಹೊರಟವೆಂದರೆ ಆ ಸಾಧನೆಯೇ ಈಶ್ವರಪೂಜೆಯಾಗುವದು. ಈ ಪೂಜೆಯಿಂದ ತೃಪ್ತನಾದ ಪರಮೇಶ್ವರನು ಭಕ್ತರ ಯೋಗಕ್ಷೇಮವನ್ನು ತಾನೇ ವಹಿಸಿ ಕೊಳ್ಳುವನು. ಸಾಧಕನು ನಿಜವಾಗಿ ಪ್ರಯತ್ನಿಸುತ್ತಿರುವದಾದರೆ ಅವನಿಗೆ ಹೇಗೋ ಬೇಕಾದ ಸಹಾಯಸಂಪತ್ತು ದೊರೆಯುವದು. ಈ ವಿಷಯದಲ್ಲಿ ಏನೇನೂ ಸಂದೇಹವಿಲ್ಲ. ವನದಲ್ಲಿ ಗೆಡ್ಡೆಗೆಣಸುಗಳಿಂದಲೇ ತೃಪ್ತರಾಗಿರುವವೆಂದು ಕುಳಿತ ಪುರಾಣಕಾಲದ ಋಷಿಗಳ ತಪಸ್ಸಿಗೆ ಆಗಾಗ ಒದಗಬಹುದಾದ ಎಡರುಗಳಿಗೆ ರಾಜಾಧಿರಾಜರುಗಳೂ ನಿವಾರಕರಾಗಿ ಸೊಂಟವನ್ನು ಕಟ್ಟಿಕೊಂಡು ನಿಲ್ಲುತ್ತಿರ ಲಿಲ್ಲವೆ ? ಈಗಲೂ ನಿಶ್ಚಿಂತೆಯಿಂದ ಅಧ್ಯಾತ್ಮಸಾಧನದಲ್ಲಿ ಮಗ್ನರಾಗಿರುವ ವರಿಗೆ ಗೊತ್ತಿಲ್ಲದ ಕಡೆಯಿಂದ ಸಹಾಯಗಳು ತಾವುತಾವೇ ಒದಗುತ್ತಿರುವದು ಅಲ್ಲಲ್ಲಿ ಕಂಡುಬಂದಿರುತ್ತದೆ.

ಇದೂ ಅಲ್ಲದೆ ವ್ಯವಹಾರವನ್ನು ಬಿಟ್ಟು ಬೇರೆಯಾಗಿ ಅಧ್ಯಾತ್ಮ ಸಾಧನವನ್ನು ಮಾಡಬೇಕೆಂದು ಯಾರೂ ಹೇಳುವದಿಲ್ಲ. ಮಾಡುವ ವ್ಯವಹಾರ ಗಳಲ್ಲಿ ನಾನು, ನನ್ನದು - ಎಂಬ ಅಭಿಮಾನವಿಲ್ಲದೆ ಬಂದ ಫಲಗಳನ್ನು ಆಸಕ್ತಿಯಿಲ್ಲದೆ ರಾಗದ್ವೇಷರಹಿತನಾಗಿ ಅನುಭವಿಸುತ್ತಾ ತನ್ನನ್ನು ತಾನು ಪರೀಕ್ಷಿಸಿಕೊಂಡು ಮನಸ್ಸನ್ನೂ ಇಂದ್ರಿಯಗಳನ್ನೂ ಹಿಡಿತದಲ್ಲಿಟ್ಟು ಕೊಂಡಿರುವದೇ ಅಧ್ಯಾತ್ಮಸಾಧನೆಯು. ''ಮಾಡುವ ಕರ್ಮಗಳಲ್ಲಿ ಅಭಿಮಾನ ವಿಲ್ಲದಿರುವದು ಹೇಗಾದೀತು ? ಮನುಷ್ಯರಾದ ನಾವುಗಳು ಯಂತ್ರಗಳಂತೆ ಸುಮ್ಮನೆ ದುಡಿಯುವದಕ್ಕೆ ಆದೀತೆ ?'' ಎಂದು ಕೆಲವರಿಗೆ ಶಂಕೆಯುಂಟಾಗ ಬಹುದು. ಆದರೆ ಅಭಿಮಾನವನ್ನು ಬಿಡುವದೆಂದರೇನೆಂಬುದನ್ನು ತಿಳಿಯು ದವರಿಗೆ ಮಾತ್ರ ಈ ಶಂಕೆಯಾಗುತ್ತದೆ. ''ಇಡಿಯ ಜಗತ್ತೇ ಪರಮೇಶ್ವರನ ಸೃಷ್ಟಿಯಾಗಿರುತ್ತದೆ. ಅದರಲ್ಲಿರುವ ಸಮಸ್ತಪದಾರ್ಥಗಳೂ ಆತನವೇ. ಆತನ ಸೃಷ್ಟಿಯಾದ ಜಗತ್ತಿನಲ್ಲಿರುವ ನಾನೂ ಆತನ ನಿಯಮದಂತೆ ಕೆಲಸ

ಮಾಡುತ್ತಿರುವೆನೇ ಹೊರತು ನಾನೊಬ್ಬನೇ ಆ ನಿಯಮಕ್ಕೆ ಹೊರಬ್ಬಾಗಿಲ್ಲ. ಆತನು ನನಗೆ ಅನುಗ್ರಹಿಸಿರುವ ಕರಣಕಳೇಬರಗಳನ್ನು ಆತನು ಗೊತ್ತು ಮಾಡಿರುವ ನಿಯಮಗಳಂತೆ ಉಪಯೋಗಿಸುತ್ತಿರುವ ನನಗೆ ನಾನು, ನನ್ನದು - ಎಂಬ ಹೆಮ್ಮೆಯನ್ನಿಟ್ಟುಕೊಳ್ಳುವದಕ್ಕೆ ಅವಕಾಶವೆಲ್ಲಿದೆ ?'' ಎಂಬ ತಿಳಿವಳಿಕೆಯಿಂದ ಶಾಸ್ತ್ರಸಮ್ಮತವಾದ ಸತ್ಕರ್ಮಗಳನ್ನೇ ಮಾಡುತ್ತಾ ಅವುಗಳೆಲ್ಲವನ್ನೂ ಪರಮೇಶ್ವರನಿಗೆ ಅರ್ಪಣೆಮಾಡುತ್ತಿರುವದೇ ಅಭಿಮಾನತ್ಯಾಗವು. ಇದು ವಿವೇಕಿಯಾದವನಿಗೆ ಕಷ್ಟಸಾಧ್ಯವೇನೂ ಅಲ್ಲ.

ಈವರೆಗೆ ಹೇಳಿದ ಶಮಾದಿಗಳೆಂಬ ಆರು ಸಾಧನಗಳು ಯಾರಲ್ಲಿರುವವೋ ಅವರಿಗೆ ಯಾರಾದರೂ ಮೋಸಮಾಡುವರೆಂಬುದಾಗಲಿ ಅವರು ಅಂಥ ಮೋಸದಿಂದ ವ್ಯಥೆಪಡುವರೆಂಬುದಾಗಲಿ ಎಂದಿಗೂ ಸಾಧ್ಯವಿಲ್ಲ. ಶಮಾದಿ ಷಟ್ಕದ ಸಂಪತ್ತುಳ್ಳವರು ಧನ್ಯರು. ಅವರಿಗೆ ಎಲ್ಲಾ ದಿಕ್ಕುಗಳೂ ಸುಖಮಯವಾಗಿರುವವು. ಅವರೇ ತಮ್ಮಲ್ಲಿರುವ ನಿಜವಾದ ಆನಂದವನ್ನು ಕಂಡುಕೊಳ್ಳುವರು ; ಅವರು ತಮ್ಮ ಆನಂದಚಂದ್ರನ ಬೆಳದಿಂಗಳ ತಂಪನ್ನು ತಮ್ಮ ಸುತ್ತುವಳೆಯದಲ್ಲೆಲ್ಲ ಹರಡಿ ಎಲ್ಲರಿಗೂ ಸುಖಶಾಂತಿಗಳನ್ನುಂಟುಮಾಡುತ್ತಿರುವರು. ಈ ಆರು ಸಾಧನಗಳ ದಾರಿಯಲ್ಲಿ ಸ್ವಲ್ಪದೂರ ನಡೆದವರು ಕೂಡ ''ಇವುಗಳಿಂದಾಗುವ ಅನುಕೂಲ್ಯವನ್ನು ಮೊದಲೇ ತಿಳಿಯದೆ ಮೋಸಹೋಗಿದ್ದೆವಲ್ಲ !'' ಎಂದು ಆಶ್ಚರ್ಯಪಡುತ್ತಿರುವರು.

☆☆☆☆

# ೫. ತೃಪ್ತಿಯ ಮರ್ಮ

**ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಮ್ ।**
**ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥***

**- ಮಹಾಭಾರತ ಮೋ. ಧ. ೧೭೪-೪೬**

ಹೂವಿನಿಂದ ಹೂವಿಗೆ ಹಾರಾಡುತ್ತಿರುವ ಜೇನುಹುಳುವಿನಂತೆ ಮನುಷ್ಯರು ವಿಷಯದಿಂದ ವಿಷಯಕ್ಕೆ ಓಡಾಡುತ್ತಿರುವರು. ಆದರೆ ಒಂದೊಂದು ಹೂವಿನಲ್ಲಿಯೂ ಅಷ್ಟಿಷ್ಟು ರಸವು ಜೇನುಹುಳುವಿಗೆ ಸಿಕ್ಕುತ್ತಲೇ ಇರುವದು. ವಿಷಯಗಳಲ್ಲಿ ಮಾತ್ರ ಯಾವದೊಂದು ಸುಖವೂ ಜನರಿಗೆ ಸಿಕ್ಕುವುದಿಲ್ಲ !

ವಿಷಯಿಗಳು ''ಇದರಿಂದ ನನಗೆ ಸುಖವಾಗುವದು'' ಎಂದು ನಂಬಿಯೇ ವಿಷಯವನ್ನು ಸೇವಿಸುತ್ತಾರೆಂಬುದು ನಿಜ. ಆದರೆ ಅವರು ವಿಷಯಗಳನ್ನು ಒಂದಾಗುತ್ತಲೊಂದರಂತೆ ಮತ್ತೆ ಮತ್ತೆ ಪರೀಕ್ಷಿಸುತ್ತಿರುವದೇ ಅವರಿಗೆ ಇನ್ನೂ ಎಲ್ಲಿಯೂ ತೃಪ್ತಿಯಾಗಿಲ್ಲವೆಂಬುದಕ್ಕೆ ನಿದರ್ಶನವಾಗಿರುತ್ತದೆ. ಎಷ್ಟೋ ಜನರು ಒಂದು ಮತವನ್ನು ಬಿಟ್ಟು ಮತ್ತೊಂದನ್ನು ಸೇರಿಕೊಳ್ಳುತ್ತಿರುವರು. ಹಿಂದುಗಳು ಕ್ರಿಸ್ತಿಯನ್ನರಾಗುವರು, ಕ್ರಿಸ್ತಿಯನ್ನರು ಮುಸಲ್ಮಾನರಾಗುವರು. ಆದರೂ ಅವರಿಗೆ ಹೊಸಮತದಲ್ಲಿ ಯಾವ ಹೆಚ್ಚಿಗೆಯ ಶಾಂತಿಯೂ ದೊರೆಯುವುದಿಲ್ಲ. ಕೆಲವರಂತೂ ಏಳು ಮನೆಯ ಚೀಲಿಯ ಹಾಗೆ ಎಷ್ಟೋ ಮತಗಳನ್ನು ಹೊಕ್ಕು ಹೊರಗೆ ಬಂದಿರುತ್ತಾರೆ. ಈಗ ಅವರಿರುವ ಮತವು ಅವರಿಗೆ ಶಾಂತಿಯನ್ನು ಕೊಟ್ಟಿರುವದೆಂಬುದನ್ನು ಹೇಗೆ ನಿಶ್ಚಯಿಸಬೇಕು ? ಜನರು ಎಷ್ಟೋ ಹಣ ಕಾಸುಗಳನ್ನು ಕೂಡಿಹಾಕುವರು. ಅದರಿಂದ ಮುಂದೆ ತಮಗೆ ಸುಖವಾಗುವದೆಂದು ನಂಬಿಯೇ ಅವರು ಆ ಸಂಪಾದನೆಗಾಗಿ ಪಡಬಾರದ ಕ್ಲೇಶಗಳನ್ನೆಲ್ಲ ಅನುಭವಿಸಿರುತ್ತಾರೆ. ಆದರೆ ಹಣವು ಗಂಟಾದಬಳಿಕ ಅವರಿಗೆ ಮೊದಲು ಎಂದಿಗೂ ಇಲ್ಲದಿದ್ದ ಯೋಚನೆಗಳು ಗಂಟುಬಿದ್ದಿರುವವು. ತಮಗೆ ಬೇಕಾದಂತೆ

---

* ಲೋಕದಲ್ಲಿ ವಿಷಯವನ್ನು ಭೋಗಿಸುವದರಿಂದಾಗುವ ಸುಖ, ಪರಲೋಕದಲ್ಲಿ ಆಗುವ ಹೆಚ್ಚಿನ ಸುಖ - ಈ ಎರಡೂ ವಿಷಯದ ಬಾಯಾರಿಕೆಯನ್ನಿಂಗಿಸಿಕೊಂಡ ಸುಖದ ವೀಸಪಾಲನ್ನೂ ಬಾಳುವದಿಲ್ಲ.

ಬಂಗಲೆಗಳನ್ನು ಕಟ್ಟಿಕೊಂಡು ಹೂದೋಟಗಳನ್ನು ನಿರ್ಮಿಸಿಕೊಳ್ಳುವರು ; ಆದರೆ ಅಲ್ಲಿಯೂ ಅವರಿಗೆ ಮನೋವ್ಯಥೆ ತಪ್ಪುವದಿಲ್ಲ, ಸ್ನೇಹಿತರನ್ನು ಕೂಡಿಹಾಕಿಕೊಳ್ಳುವರು, ಸಮಾಜಗಳನ್ನೂ ಸಮಾಶ (ಒಟ್ಟಿಗೆ ಭೋಜನ) ಗಳನ್ನೂ ಏರ್ಪಡಿಸುವರು. ಅಧಿಕಾರಗಳನ್ನೂ ಬಿರುದುಬಾವಲಿಗಳನ್ನೂ ಸಂಪಾದಿಸುವರು ; ಆದರೂ ತೃಪ್ತಿಯಾಗುವದಿಲ್ಲ. ತೃಪ್ತಿಯ ಸ್ಥಾನವು ಇರುವದೇ ಬೇರೆಯಕಡೆಯೆಂದೂ ಜನರು ಅದನ್ನು ಹುಡುಕುತ್ತಿರುವದೇ ಬೇರೆಯ ಕಡೆಯೆಂದೂ ಇದರಿಂದ ನಿರ್ಣಯವಾಗುವದಲ್ಲವೆ ?

ವಿಷಯಗಳಲ್ಲಿ ಸುಖವೇ ಇಲ್ಲದಿದ್ದರೆ ಇಂಥ ವಿಷಯದಿಂದ ಇಂಥ ಸುಖವನ್ನು ಹೊಂದಿದೆವೆಂದು ಜನರು ಅನ್ನುತ್ತಾರಲ್ಲ ! ಈ ಭ್ರಮೆಯೆಂತು ಹುಟ್ಟಿತು ? ಎಂದು ನೀವು ಕೇಳಬಹುದು. ಇಲ್ಲಿ ಒಂದು ರಹಸ್ಯವಿದೆ : ವಿಷಯಗಳು ನಮಗೆ ದೊರೆತಾಗ ನಮಗೆ ಸುಖವಾಗುವದಿಲ್ಲ, ದುಃಖವು ಹೋಗುವದು. ದುಃಖದ ನೀಗುವಿಕೆಯನ್ನು ಜನರು ಸುಖವೆನ್ನುತ್ತಿರುವರು. ಅಷ್ಟೆ. ಇಂಥಿಂಥ ವಿಷಯವು ಬೇಕೆಂದು ಮನಸ್ಸು ತಕಪುಕನೆ ಹಾರಾಡುತ್ತಿರುವದಷ್ಟೆ. ಆ ಹೊಯ್ದಾಟದಲ್ಲಿ ಅದಕ್ಕೆ ಬಹಳ ವ್ಯಥೆಯಾಗುತ್ತಿರುವದು. ಇಂಥ ಸಂದರ್ಭದಲ್ಲಿ ವಿಷಯವು ಸಿಕ್ಕಿತೆಂದರೆ ದುಃಖವು ಹೋಗಿಬಿಡುವದು. ಹೀಗೆ ದುಃಖವು ತೊಲಗಿದ್ದನ್ನೇ ಅನೇಕರು ಸುಖವೆಂದು ಕರೆಯುತ್ತಿರುವರು. ಅವರಿಗೆ ನಿಜವಾದ ಸುಖವೆಂದರೇನೆಂಬುದೇ ತಿಳಿದಿರುವದಿಲ್ಲ.

ಅಜೀರ್ಣವಾಗುವವರೆಗೂ ಆಹಾರವನ್ನು ತೆಗೆದುಕೊಂಡು ಹೊಟ್ಟೆ ನೋವು ಹೋಗುವದಕ್ಕಾಗಿ ಔಷಧಿಯನ್ನು ತೆಗೆದುಕೊಳ್ಳುತ್ತಿರುವವನಿಗೆ ಹಸಿದು ಉಂಡರೆ ಆಹಾರವು ಸವಿಯಾಗಿ ತೋರುವದೆಂಬುದೇ ಹೇಗೆ ತಿಳಿಯದೋ, ಹಗಲೂ ಇರುಳೂ ಬಿದ್ದಲ್ಲಿಬಿದ್ದಿದ್ದು ತೂಕಡಿಕೆ ಹತ್ತದೆ ಇರುವದಕ್ಕಾಗಿ ನಸ್ಯವೇ ಮುಂತಾದವುಗಳನ್ನು ಸೇವಿಸುತ್ತಿರುವ ಸೋಮಾರಿಗೆ ಚಟುವಟಿಕೆಯುಳ್ಳ ಜನರಿಗೆ ಜಾಗರಣೆಯಿಂದ ಲವಲವಿಕೆಯುಂಟಾಗುವದೆಂಬುದು ಹೇಗೆ ತಿಳಿಯದೋ, ಎಂದೆಂದೂ ಅಕ್ಕಿಯ ಹಿಟ್ಟು ಬೆರೆದ ನೀರನ್ನೇ ಹಾಲೆಂದು ಕುಡಿಯುತ್ತಲಿದ್ದು ಒಂದು ದಿನ ಅದರಲ್ಲಿ ಸ್ವಲ್ಪ ಸಕ್ಕರೆಯನ್ನು ಬೆರೆಯಿಸಿಕೊಂಡು ಕುಡಿಯುವ ಸುಖಾಭಾಸಕ್ಕೆ ಮರುಳಾಗುವವನಿಗೆ ನಿಜವಾದ ಹಾಲಿನಿಂದಾಗುವ ಉತ್ತಮ

ಸುಖವು ಹೇಗೆ ತಿಳಿಯದೋ, ಹಾಗೆಯೇ ವಿಷಯಪ್ರಾಪ್ತಿಯಿಂದ ದುಃಖವು ಹೋಗುವದನ್ನೇ ಸುಖವೆಂದು ಮೋಹಿತರಾಗಿರುವವರಿಗೆ ನಿಜವಾದ ಸುಖವೆಂದರೇನೆಂಬುದು ತಿಳಿದಿರುವದಿಲ್ಲ. ವಿಷಯಗಳ ಬಯಕೆಯೇ ದುಃಖವು, ಯಾವ ಬಯಕೆಯೂ ಇಲ್ಲದಿರುವದೇ ಪರಮಸುಖವು. ಇದು ಸಾಮಾನ್ಯರಿಗೆ ತಿಳಿದೇ ಇರುವದಿಲ್ಲ.

ವಿಷಯಗಳಿಗೂ ಇಂದ್ರಿಯಗಳಿಗೂ ಸಂಬಂಧವಾಗದೆ ವಿಷಯಭೋಗವೆಂಬುದಾಗುವಂತಿಲ್ಲ. ಆದರೆ ವಿಷಯಕ್ಕಾಗಲಿ ಇಂದ್ರಿಯಕ್ಕಾಗಲಿ ಸ್ಥಿರತ್ವವೆಂಬುದೇ ಇಲ್ಲ. ಮೊದಮೊದಲು ವಿಷಯಾನುಭವವು ಅಮೃತದಂತೆ ಇರುತ್ತದೆ. ಕೊನೆಕೊನೆಗೆ ವಿಷವಾಗುತ್ತದೆ. ವಿಷಯಗಳ ಆಸೆಯೆಂಬುದು ವಿಷಯಗಳನ್ನನುಭವಿಸುವದರಿಂದ ಹೋಗುವದಿಲ್ಲ. ಉಪ್ಪುನೀರು ಕುಡಿದವನ ನೀರಡಿಕೆಯಂತೆಯೂ ತುಪ್ಪವನ್ನು ಸುರಿದ ಬೆಂಕಿಯ ಉರಿಯಂತೆಯೂ ಅದು ಹೆಚ್ಚುತ್ತಲೇ ಹೋಗುವದು. ಎಷ್ಟೋ ವಿಷಯಗಳು ನಮಗೆ ಸಿಕ್ಕುವವರೆಗೂ ಚಿತ್ತವನ್ನು ಎಳೆಯುತ್ತಿರುವವು. ಆದರೆ ಸಿಕ್ಕಿದಮೇಲೆ ಅವುಗಳಲ್ಲಿ ಯಾವ ಸಾರವೂ ಕಾಣುವದಿಲ್ಲ. ಕೆಲವು ವಿಷಯಗಳು ಮುಟ್ಟಿದರೆ ಮುನಿಯಂತೆ ಇಂದ್ರಿಯಗಳು ಸೋಂಕಿದಮಾತ್ರದಿಂದ ಮುದುರಿಕೊಳ್ಳುವವು ; ಇನ್ನು ಕೆಲವು ತುರುಚಿಯ ಗಿಡದಂತೆ ತಿನಿಸನ್ನೆಬ್ಬಿಸುವವು ; ಅಂತೂ ವಿಷಯಗಳು ಸಿಕ್ಕುವದು ಕಷ್ಟ ; ಸಿಕ್ಕಿದರೆ ಅವುಗಳಿಂದ ಸುಖವಾಗುವದು ಸಂಶಯ ; ಆಭಾಸವಾಗಿರುವ ಸುಖವು ದೊರೆತರೂ ಅದು ಶಾಶ್ವತವಾಗಿರುವದು ಅಸಾಧ್ಯ. ಹೀಗೆ ನೋಡಿದರೆ ವಿಷಯಗಳಲ್ಲಿ ಪ್ರವರ್ತಿಸುವದೇ ಸರಿಯಲ್ಲವೆಂಬುದು ನಮಗೆ ಪರಿಪರಿಯಿಂದ ಮನದಟ್ಟಾಗುತ್ತಿರುವದು.

ಇದರಂತೆಯೇ ವಿಷಯಗಳ ಸಂಬಂಧವಿಲ್ಲದೆ ಇರುವದರಿಂದ ಪರಮ ಸುಖವುಂಟೆಂಬುದೂ ನಮಗೆ ಬಗೆಬಗೆಯಾಗಿ ತೋರುತ್ತಿರುವದು. ವಿಷಯಗಳನ್ನು ಹೆಚ್ಚು ಹೆಚ್ಚಾಗಿ ರಾಶಿಹಾಕಿಕೊಂಡಿರುವವರು ಒಬ್ಬರಮೇಲೊಬ್ಬರು ರೇಗಿಬೀಳುತ್ತಿರುವರು ; ಒಬ್ಬರಿಗೊಬ್ಬರು ಅಂಜುವರು ; ಒಬ್ಬರಲ್ಲೊಬ್ಬರು ಸಂಶಯವುಳ್ಳವರಾಗಿರುವರು ; ಒಬ್ಬರಲ್ಲೊಬ್ಬರು ಅಸೂಯೆಯುಳ್ಳವರಾಗಿರುವರು. ಅವರು ಸುಮ್ಮಸುಮ್ಮನೆ ಯೋಚನೆಯನ್ನು ಹತ್ತಿಸಿಕೊಳ್ಳುತ್ತಿರುವರು ;

ಸುಮ್ಮಸುಮ್ಮನೆ ಚಿಂತೆಯಲ್ಲಿ ಮುಳುಗಿರುವರು ; ಕ್ಷಣಕ್ಕೆ ಚಿತ್ತ ; ಕ್ಷಣಕ್ಕೆ ಪಿತ್ತ- ಹೀಗೆ ಮಾರ್ಪಡುತ್ತಿರುವರು. ಯಾರಲ್ಲಿ ವಿಷಯವಿಲ್ಲವೋ ಅಥವಾ ವಿಷಯಾ ಸಕ್ತಿಯಿರುವದಿಲ್ಲವೋ ಅವರಿಗೆ ನನ್ನದು ಎಂಬ ಹಕ್ಕುದಾರಿಕೆಯನ್ನು ಸ್ಥಿರಪಡಿಸಿ ಕೊಳ್ಳಬೇಕಾದದ್ದಿರುವದಿಲ್ಲ ; ಮತ್ತೊಬ್ಬರಿಗೆ ತಕ್ಕ ದಂಡನೆಯನ್ನು ಮಾಡ ಬೇಕೆಂಬ ರಚ್ಚು ಇರುವದಿಲ್ಲ ; ಮತ್ತೊಬ್ಬರು ಅಂಥವರು, ಇಂಥವರು - ಎಂದು ಅವರ ದುರ್ಗುಣಗಳನ್ನು ಎತ್ತೆಣಿಸಿ ಅಸೂಯೆಪಡಬೇಕಾದದ್ದೂ ಇರುವದಿಲ್ಲ. ನಿಜವಾಗಿ ವಿಷಯದಲ್ಲಿ ವಿರಕ್ತರಾಗಿರುವವರು ತಮಗೆ ಕೇಡನ್ನು ಬಯಸುವವ ರಿಗೂ ಒಳ್ಳೆಯದನ್ನೇ ಮಾಡುವರು ; ಎಲ್ಲರಲ್ಲಿಯೂ ಹಿತಬುದ್ಧಿಯಿಂದ ಶಾಂತರಾಗಿಯೇ ವರ್ತಿಸುವರು ; ಅವರ ಮನಸ್ಸಿನ ಸಮಾಧಾನವು ಎಂದಿಗೂ ಹೋಗುವದಿಲ್ಲ.

"ವಿಷಯಗಳೇ ಇಲ್ಲದಿದ್ದರೆ ಮನಸ್ಸಿಗೆ ಸಂತೋಷವಾಗುವದು ಹೇಗೆ ? ಊಟ-ಉಪಚಾರಗಳು, ಬಟ್ಟೆಬರೆಗಳು - ಇಷ್ಟಾದರೂ ಬೇಡವೆ ?" ಎಂದು ಕೆಲವರನ್ನುವರು. ಆದರೆ ಮನುಷ್ಯನ ಹೊಟ್ಟೆಯು ಎಷ್ಟುದ್ದ, ಎಷ್ಟಗಲ, ಎಷ್ಟಾಳ - ಇರುವದು ? ಇವನಿಗೆ ಬೇಕಾದ ವಸ್ತ್ರಗಳ ಅಳತೆಯೆಲ್ಲ ಎಷ್ಟು ಮೊಳವಾದೀತು ? ಇವನು ಮಲಗುವದಕ್ಕೆಲ್ಲ ಎಷ್ಟಗಲದ ಹಾಸಿಗೆ ಬೇಕಾದೀತು ? ವಾಸಕ್ಕೆ ಎಷ್ಟು ವಿಸ್ತೀರ್ಣವಾದ ಮನೆ ಬೇಕಾದೀತು ? ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿರೆಂದು "ವಿಷಯಗಳು ಬೇಡವೆ ?" ಎನ್ನುವವರನ್ನು ಕೇಳಬೇಕು. ನಿಜವಾಗಿ ನೋಡಿದರೆ ಮನುಷ್ಯನಿಗೆ ಬೇಕಾಗಿರು ವದು ತೀರ ಸ್ವಲ್ಪವೇ ; ಅವನ ಆಸೆ ಮಾತ್ರ ಮೂರು ಲೋಕವೂ ಹಿಡಿಸದಷ್ಟು ಇರುವದು. ಮೂರುವರೆ ಮೊಳದ ದೇಹಕ್ಕಾಗಿ ಅವನು ಒಂದೆರಡು ಚದರ ಮೈಲಿಯಗಲಕ್ಕೂ ಹತ್ತೆಂಟು ಅಂತಸ್ತುಗಳ ಉಪ್ಪರಿಗೆಗಳಾಗಬೇಕು - ಎನ್ನು ವನು ; ತಾನು ಹೊದೆಯುವ ಬಟ್ಟೆಗಾಗಿ ಜವಳಿಯ ಅಂಗಡಿಗಳಲ್ಲಿ ಸಾವಿರಾರು ರೂಪಾಯಿಗಳ ಬೆಲೆಯುಳ್ಳ ರೇಷ್ಮೆಯ ಅಥವಾ ಉಣ್ಣೆಯ ವಸ್ತ್ರಗಳನ್ನೂ ಜರತಾರಿಯ ಉಡುಪುಗಳನ್ನೂ ಸಾಲವಾಗಿ ತರುವನು ; ಊಟಕ್ಕೆಂದು ನೂರಾರು ಖಂಡುಗದ ದವಸವನ್ನು ಹಗೇವಿನಲ್ಲಿ ತುಂಬಿಡಲೆಳಸುವನು ! ವಿಷಯದಾಸೆಯು ಇನ್ನೂ ಮುಂದಕ್ಕೆ ಹೊರಟರಂತೂ ಅದಕ್ಕೆ ಅಂತವೇ ಇರುವದಿಲ್ಲ. ಆದರೆ

ಬೇಕೆಂದಮಾತ್ರದಿಂದ ಬಯಸಿದ ವಸ್ತುಗಳನ್ನು ಒಪ್ಪಿಸುವ ಕಾಮಧೇನು, ಕಲ್ಪವೃಕ್ಷ, ನಂದನವನ - ಮುಂತಾದ ವೈಭವಗಳಿರುವ ಇಂದ್ರಾದಿಗಳಿಗಾದರೂ ಭೋಗದಿಂದ ತೃಪ್ತಿಯಾಗಿರುವದೆ ? ಇಂದ್ರಾದಿಗಳಿಗೂ ಒದಗಿರುವ ಕಷ್ಟ ಪರಂಪರೆಯನ್ನು ಪುರಾಣಗಳಿಂದ ಕೇಳಿರುವವರು ವಿಷಯಗಳಿಗೆ ಎಷ್ಟು ಬೆಲೆ ಕೊಡಬಹುದು ?

ಇದೆಲ್ಲ ಮಿತಿಮೀರಿದ ವಿಷಯಸಂಗ್ರಹದಿಂದ ಆಸೆಯು ಮುಂದುವರೆಯುವದರಿಂದಾಗುವ ಅನರ್ಥವನ್ನು ಕುರಿತ ಮಾತಾಯಿತು. ಆದರೆ "ವಿಷಯಗಳು ಒಂದಿಷ್ಟೂ ಇಲ್ಲದೆ ಆನಂದವಾಗುವದುಂಟೆ ?" ಎಂಬ ಪ್ರಶ್ನೆಗೆ ಇನ್ನೂ ಉತ್ತರವನ್ನು ಹೇಳಿದಂತೆ ಆಗಿಲ್ಲ. ಇದಕ್ಕೆ ತನಿನಿದ್ರೆಯ ಅನುಭವವನ್ನು ಸಾಕ್ಷಿಯಾಗಿ ಕೊಡಬೇಕಾಗುವದು. ನಿದ್ರೆಯ ಸುಖವನ್ನು ಬಯಸದ ಪ್ರಾಣಿ ಯಾವದಾದರೂ ಉಂಟೆ ? ಇಲ್ಲ. ಆದರೂ ಆ ಸುಖವು ಯಾವದೊಂದು ವಿಷಯುವನ್ನೂ ಅಪೇಕ್ಷಿಸುವದಿಲ್ಲವಲ್ಲ ! ದೇವರು ಅದನ್ನು ಎಷ್ಟು ಅಗ್ಗವಾಗಿ ಮಾಡಿರುತ್ತಾನೆ ! ಅದಕ್ಕೆ ಯಾವ ಸಾಮಗ್ರಿ ಬೇಕು ? ಎಷ್ಟು ಐಶ್ವರ್ಯವಿರಬೇಕು ? ಒಂದೂ ಬೇಕಿಲ್ಲ. ಇಷ್ಟೇ ಅಲ್ಲ. ಎರಡನೆಯದೇನಾದರೂ ಇದ್ದರೆ ನಿದ್ರಾಸುಖವೇ ದಕ್ಕುವಹಾಗಿಲ್ಲ ! ಅದಕ್ಕೆ ಪ್ರತಿಬಂಧಕವಾಗಿರುವ ಮನಶ್ಶಾಂತಿಯನ್ನು ಕಳೆಯುವ ದುರ್ವ್ಯಾಪಾರವೊಂದಿಲ್ಲದಿದ್ದರಾಯಿತು. ತಾರತಮ್ಯವನ್ನು ಮಾಡದೆ ಯಾರಿಗಾದರೂ ಒಂದೇಸಮನಾಗಿ ಅದು ದೊರಕಿಬಿಡುವದು !

ಆದ್ದರಿಂದ ನಿಜವಾದ ತೃಪ್ತಿಯ ಮರ್ಮವೇನಾಯಿತು ? ಆ ಮರ್ಮವು ಯಾರಿಗೆ ಮಾತ್ರ ಗೊತ್ತಿರುವದು ? ಯಾರು ಈ ಲೋಕ ಮತ್ತು ಪರಲೋಕದ ಸೌಖ್ಯಗಳ ಬೆಲೆಯನ್ನು ನಿರ್ಣಯಿಸಿಕೊಂಡಿರುವರೋ, ಆ ವೈರಾಗ್ಯಚಕ್ರವರ್ತಿಗಳಿಗೆ ಮಾತ್ರ ನಿತ್ಯತೃಪ್ತಿಯ ಸವಿಯು ಗೊತ್ತಿರುವದು. ಅವರು ಮಾತ್ರ ತಮ್ಮೊಳಗಿರುವ ನಿತ್ಯಾನಂದವನ್ನು ಕಂಡುಕೊಂಡು ನಿತ್ಯತೃಪ್ತರಾಗಿರಬಲ್ಲರು.

☆☆☆☆

# ೬. ಶಾಂತಿದಾಯಕವಾದ ಜ್ಞಾನ

ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾ -
ಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್ ।
ತಮಾತ್ಮಸ್ಥಂ ಯೇಽನುಪಶ್ಯನ್ತಿ ಧೀರಾ -
ಸ್ತೇಷಾಂ ಶಾನ್ತಿಃ ಶಾಶ್ವತೀ ನೇತರೇಷಾಮ್ ॥

-ಕಠ ೨-೨-೧೩.

''ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಕರ್ಮಫಲವನ್ನು ಅನುಭವಿಸಬೇಕೆಂಬ ಆಸೆಯೇ ಇಲ್ಲದವರು ಯಾವ ಕೆಲಸವನ್ನಾದರೂ ಏತಕ್ಕೆ ಮಾಡಿಯಾರು ? ಎಲ್ಲಾ ಭೋಗಗಳ ಆಸೆಯನ್ನೂ ಬಿಡುವದೆಂಬುದು ಸಾಧ್ಯವೆ ? ಇದೇಕೋ ಸಂಗತವಾಗಿ ತೋರುವದಿಲ್ಲವಲ್ಲ !'' ಎಂದು ಕೆಲವರಿಗೆ ಶಂಕೆಯುಂಟಾಗಬಹುದು. ಇದಕ್ಕೇನು ಸಮಾಧಾನವೆಂಬುದನ್ನು ಈಗ ವಿವರಿಸುವೆನು.

ಲೋಕದಲ್ಲಿ ಯಾವದಾದರೊಂದು ಕರ್ಮದ ಫಲವನ್ನು ಅನುಭವಿಸಬೇಕೆಂದು ಜನರು ಹವಣಿಸುವದಾದರೂ ಏತಕ್ಕೆ ? ಅದರಿಂದಾಗುವ ಸುಖಕ್ಕೆ - ಎಂಬ ಉತ್ತರವು ಸರಿಯಾಗುವದಿಲ್ಲ. ಏಕೆಂದರೆ ವಿಷಯಗಳಿಗೆ ಸುಖವನ್ನು ಕೊಡುವ ಶಕ್ತಿಯಿದೆ ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಇದನ್ನು ಹಿಂದೆಯೇ ವಿವರಿಸಿರುತ್ತದೆ. ಕರ್ಮದಲ್ಲಿ ಕೈಹಾಕುವದಕ್ಕೆ ಮೊದಲು ಮನುಷ್ಯನ ಮನಸ್ಸಿನ ಸ್ಥಿತಿ ಹೇಗಿರುವದೆಂಬುದನ್ನು ವಿಮರ್ಶಿಸಿದರೆ ಮನುಷ್ಯನಿಗೆ ಬೇಸರಿಕೆಯಾಗುವಾಗ ಮನುಷ್ಯನು ವಿನೋದಗಳಿಗೆ ಹಾತುವರಿಯುವನು ; ಹಸಿವಾಗಿರುವಾಗ ಊಟಕ್ಕೆ ಹಂಬಲಿಸುವನು ; ನಾಲಗೆಯು ಸವಿಯನ್ನು ನೆನಸಿಕೊಂಡಾಗ ಅದರ ಸೆಳೆತಕ್ಕೆ ಕಟ್ಟುಬೀಳುವನು. ಅಂತೂ ಮನಸ್ಸು ನಿಲುಗಡೆಯಿಲ್ಲದೆ ತವಕಿಸುತ್ತಿರುವಾಗ 'ಅದನ್ನು ಮಾಡೋಣ, ಇದನ್ನು ಮಾಡೋಣ !''

* ಅನಿತ್ಯವಾದ ಭೂತಗಳಲ್ಲೆಲ್ಲ ನಿತ್ಯನಾಗಿ, ಚೇತನಗಳ ಚೇತನನಾಗಿ, ಅನೇಕ ಜೀವರುಗಳ ಕಾಮಗಳನ್ನು ಯಾವನೊಬ್ಬನೇ ಈಡೇರಿಸಿಕೊಡುತ್ತಿರುವನೋ ಆ ಪರಮಾತ್ಮನನ್ನು ತಮ್ಮಲ್ಲಿಯೇ ಇರುವನೆಂದು ಯಾರು ಉಪದೇಶದಿಂದ ಕಂಡುಕೊಳ್ಳುವರೋ ಆ ಜ್ಞಾನಿಗಳಿಗೇ ಶಾಂತಿಯು ದೊರಕುವದು, ಮಿಕ್ಕವರಿಗಿಲ್ಲ.

ಎನ್ನುವನು. ಆದ್ದರಿಂದ ಮನುಷ್ಯನಿಗೆ ಬೇಕಾದ್ದೇನು ? ಶಾಂತಿ. ಅದಕ್ಕಾಗಿ ಬೇರೆಬೇರೆಯ ಕರ್ಮಗಳನ್ನು ಹುಡುಕಿಕೊಂಡು ಹೋಗಿ ಅವುಗಳ ಫಲವನ್ನು ಅನುಭವಿಸಿದರೆ ತನಗೆ ಶಾಂತಿಯುಂಟಾಗುವದೆಂದು ಭಾವಿಸಿರುವನು. ಈ ಭಾವನೆಯು ತಪ್ಪೆಂದು ವಿಸ್ತರಿಸಿ ತಿಳಿಸಬೇಕಾದದ್ದೇ ಇಲ್ಲ. ಮನುಷ್ಯನು ಒಂದು ಕೆಲಸದ ಫಲವನ್ನು ಅನುಭವಿಸಿ ಆಯಿತೋ ಇಲ್ಲವೋ, ಮತ್ತೊಂದು ಕರ್ಮದ ಫಲಕ್ಕೆ ಅವನ ಮನಸ್ಸು ಜೋಲುಬೀಳುವದೇ ಅವನಿಗೆ ನಿಲುಗಡೆಯಾದ ಶಾಂತಿಯಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ.

ಹೀಗೆ ಮನುಷ್ಯನು ಶಾಂತಿಗಾಗಿ ಕೆಲಸವನ್ನು ಮಾಡುತ್ತಿರುವದರಿಂದಲೂ ಯಾವ ಕೆಲಸವನ್ನು ಮಾಡಿದರೂ ಅವನಿಗೆ ನಿಜವಾದ ಶಾಂತಿ ದೊರಕುವಂತಿಲ್ಲ ವಾದ್ದರಿಂದಲೂ ಯಾವ ಭೋಗದಿಂದಲೂ ಶಾಂತಿಯು ದೊರಕುವದಿಲ್ಲವೆಂದು ತಿಳಿದಕೂಡಲೆ ಅವನು ಎಲ್ಲಾ ಭೋಗಗಳನ್ನೂ ಬಿಟ್ಟುಬಿಡುವನು. ನಮಗೆ ಲವು ಆಸೆಗಳನ್ನು ಬಿಡುವದು ತೀರ ಕಷ್ಟವಾಗಿದೆ, ನಿಜ ; ಆದರೂ ಮತ್ತೆ ುವರು ಅವನ್ನು ಪೂರ್ಣವಾಗಿ ಬಿಟ್ಟು, ಬಿಟ್ಟು, ಅವುಗಳ ಯೋಚನೆಯನ್ನೇ ಟ್ಟುಕೊಳ್ಳದೆ ಇರುವದು ನಮ್ಮ ಕಣ್ಣಮುಂದೇ ಇರುತ್ತದೆ. ಇದರಂತೆ ವಿಷಯ ಗಳಿಗೆ ಸುಖವನ್ನು ಕೊಡುವ ಶಕ್ತಿಯಿದೆಯೆಂದೂ ಆ ಸುಖದಿಂದ ಶಾಂತಿ ಯುಂಟೆಂದೂ ನಂಬಿರುವವರಿಗೆ ವಿಷಯದಾಸೆಯನ್ನು ಬಿಡುವದು ಕಡುಕಷ್ಟ ವಾಗಿರಬಹುದು ; ಆದರೂ ಅವುಗಳಲ್ಲಿ ಯಾವ ಸುಖವೂ ಇಲ್ಲವೆಂತಲೂ ಯಾವ ಶಾಂತಿಯೂ ಇಲ್ಲವೆಂತಲೂ ಯಾರು ನಿರ್ಣಯಿಸಿಕೊಂಡಿರುವರೋ ಅಂಥ ವಿವೇಕಿಗಳು ವಿಷಯವನ್ನು ಎಂದೆಂದಿಗೂ ನೆನಪಿಗೆ ತಂದುಕೊಳ್ಳುವದಿಲ್ಲ.

ಇಂಥ ನಿರ್ಣಯಜ್ಞಾನವು ಉಂಟಾಗುವದು ಹೇಗೆ ? ಈ ಪ್ರಶ್ನೆಗೆ ಹಲವು ಉತ್ತರಗಳುಂಟು. ಮನುಷ್ಯನು ವಿಷಯಗಳನ್ನು ಮತ್ತೆ ಮತ್ತೆ ಅನುಭವಿಸಿ ಬೇಸರಾಗಿ ತಾನೇ ಜ್ಞಾನದಲ್ಲಿ ಮನಸ್ಸು ಹಾಕುತ್ತಾನೆ - ಎಂದು ಕೆಲವರ ಮತ. ವಿಷಯಗಳ ಸುಖವು ದೊರೆತಮೇಲೆ ಅವುಗಳನ್ನು ಅನುಭವಿಸಿ ಅದಕ್ಕಿಂತಲೂ ಹೆಚ್ಚಿನ ಸುಖವು ಬೇಕು ಎಂದು ಯಾರಿಗೆ ಅನ್ನಿಸುವದೋ ಅಂಥವರು ಜ್ಞಾನದಲ್ಲಿ ಮನಸ್ಸು ಹಾಕುತ್ತಾರೆ - ಎಂದು ಮತ್ತೆ ಕೆಲವರ ಮತ. ಈ ಎರಡು ಪಕ್ಷಗಳೂ ಸರಿಯಲ್ಲ. ಏಕೆಂದರೆ ಮೊದಲನೆಯದಾಗಿ ವಿಷಯಗಳ ಭೋಗದಲ್ಲಿ

ಮುಳುಗಿರುವವರಿಗೆ ಬೇಸರಹುಟ್ಟುವ ಸಂಭವವೇ ಇಲ್ಲ. ನಮ್ಮಗಳಿಗೆ ವಿಷವು ಅಪಾಯಕರವೆಂದು ತಿಳಿದಿದ್ದರೂ, ವಿಷದಲ್ಲಿಯೇ ಇದ್ದುಕೊಂಡು ಜೀವಿಸುವ ಹುಳುಗಳಿಗೆ ಅದೇ ಬದುಕಿರುವದಕ್ಕೆ ಸಾಧನವಾಗಿರುವಂತೆ ವಿಷಯಿಗಳಿಗೆ ವಿಷಯಭೋಗವೇ ಜೀವನಸಾಧನ. ನೀರಿನಿಂದ ಹೊರತೆಗೆದ ಕೂಡಲೆ ಮೀನುಗಳು ಒದ್ದಾಡಿಕೊಂಡು ಸಾಯುವಂತೆ ವಿಷಯಿಗಳು ವಿಷಯಭೋಗವು ತಪ್ಪಿದ ಕೂಡಲೆ ಚಡಪಡಿಸುವರು. ವಿಷಯಗಳು ದೊರಕುವದೇ ಕಷ್ಟ ; ಅವು ದೊರಕಿದರೂ ಅವುಗಳಿಂದ ನಮಗೆ ಸುಖವು ದೊರಕುವದೆಂಬುದೂ ಅಸಂಭವ. ಇದನ್ನು ಹಿಂದೆಯೇ ವಿವರಿಸಿ ತಿಳಿಸಿದ್ದಾಗಿದೆ. ಎಷ್ಟೋ ವಿಷಯಗಳನ್ನು ಬೇಕೆಂದು ನಾವು ಹಿಂದೆ ಹಂಬಲಿಸಿದೆವಲ್ಲ, ಅವೆಲ್ಲ ನಮಗೆ ದೊರಕಿದವೇನು ? ಇಲ್ಲ. ಆದರೂ ವಿಷಯಿಗಳು ಈ ವಿವೇಕವನ್ನು ಪಡೆಯುವದಿಲ್ಲ. ಇಷ್ಟು ದಿನ ಶ್ರಮ ಪಟ್ಟರೂ ದೊರೆಯದಿರುವ ಕೆಲವು ವಿಷಯಗಳು ಇನ್ನು ಮುಂದೆ ಎಂದಾದರೊಂದು ದಿನ ಏತಕ್ಕೆ ದೊರೆಯಬಾರದು ? - ಎಂದೇ ಅವರ ದುರಾಶೆಯು ಅವರನ್ನು ತವಕಪಡಿಸುತ್ತಿರುವದು. ಆದ್ದರಿಂದಲೂ ಅವರು ವಿಷಯಗಳ ಸಂಪಾದನೆಗೂ ಅವುಗಳ ಫಲದ ಭೋಗಕ್ಕೂ ಪ್ರಯತ್ನವನ್ನು ಮಾಡುತ್ತಲೇ ಇರುವರು. ಇದಲ್ಲದೆ ಭೋಗವೂ ಸ್ಥಿರವಾಗಿರುವ ಸಂಭವವಿಲ್ಲ. ಇದನ್ನು ಆಗಲೆ ವಿವರಿಸಿ ತಿಳಿಸಿದ್ದಾಗಿದೆ. ವಿಷಯಿಗಳಿಗೆ ಈ ಅಸ್ಥಿರತ್ವವು ಸ್ವಾಭಾವಿಕವಾಗಿ ಕಾಣುವದಿಲ್ಲ. ಮತ್ತೊಮ್ಮೆ ಪ್ರಯತ್ನವನ್ನು ಮಾಡಿ ವಿಷಯಗಳನ್ನು ಸಂಪಾದಿಸಿಕೊಳ್ಳಬೇಕು, ಈ ಸಲ ಅವನ್ನು ಆದಷ್ಟು ಮಟ್ಟಿಗೂ ದೀರ್ಘಕಾಲದವರೆಗೂ ಭೋಗಿಸಬೇಕು - ಎಂದೇ ಅವರು ಆಲೋಚಿಸಿಕೊಳ್ಳುವರು. ವಿಷಯಗಳಿಂದ ಸುಖವನ್ನು ದೊರಕಿಸಿಕೊಳ್ಳುವದೆಂಬುದು ಮಳಲಲ್ಲಿ ಎಣ್ಣೆಯನ್ನು ಹಿಂಡಿಕೊಳ್ಳುವಷ್ಟೇ ಸುಲಭವಾಗಿರುತ್ತದೆ ಎಂಬುದನ್ನು ನಾವು ಆಗಲೆ ವಿವರಿಸಿ ತಿಳಿಸಿರುತ್ತೇವೆ ಆದರೆ ಇದೂ ವಿಷಯಿಗಳಿಗೆ ಮನವರಿಕೆಯಾಗಿರುವದಿಲ್ಲ.

ವಿಷಯಗಳಿಂದ ಸುಖವು ದೊರಕುವದೆಂದೇ ಅವರ ನಿರ್ಧಾರವಾಗಿಬಿಟ್ಟಿರುತ್ತದೆ ! ಹೀಗಿರುವಾಗ ವಿಷಯಭೋಗವನ್ನು ಎಷ್ಟು ಸಲ ಮಾಡಿದರ ತಾನೆ ಅವರಿಗೆ ಬೇಸರವಾದೀತು ? ಎಂದಿಗೂ ಆಗದು. ಆದ್ದರಿಂದ ಮೊದಲನೆಯ ಪಕ್ಷವು ಸರಿಯಲ್ಲ.

ಇನ್ನು ಎರಡನೆಯ ಪಕ್ಷವೂ ಇದೇ ಕಾರಣದಿಂದ ಯುಕ್ತವಲ್ಲವೆಂದು ಹೇಳಬಹುದು. ಏಕೆಂದರೆ ವಿಷಯಸುಖವು ದೊರೆತರೆ ಆ ಸುಖವು ಸಾಕೆನಿಸುವದು ತೀರ ಅಸಂಭವ. ಅದಕ್ಕಿಂತ ಹೆಚ್ಚಿನ ಸುಖವೊಂದು ಇದೆ ಎಂದು ಯಾವ ಶಾಸ್ತ್ರವು ಸಾರಿದರೆತಾನೆ ವಿಷಯಿಗಳು ಎದುರಿಗಿರುವ ಸುಖವನ್ನು ಬಿಟ್ಟು, ಪರೋಕ್ಷವಾದ ಮತ್ತೊಂದು ಸುಖಕ್ಕೆ ಕೈನೀಡಿಯಾರು ? ವಿಷಯಗಳನ್ನು ಬಿಟ್ಟ ಸಾಧುಗಳು ಅವರೆದುರಿಗೆ ಕಾಣಬಹುದು. ಆದರೆ ಆ ಸಾಧುಗಳೆಂಬುವರು ಸುಖದ ಸವಿಯನ್ನರಿಯದ ಕಾಡುಜನರೆಂದೇ ವಿಷಯಿಗಳು ಬಗೆಯುವರೇ ಹೊರತು ಅವರನ್ನು ಕಂಡಮಾತ್ರದಿಂದ ವಿಷಯಸುಖಕ್ಕಿಂತ ಹೆಚ್ಚಿನ ಸುಖವೊಂದು ಇದೆ ಎಂದು ಎಂದಿಗೂ ನಂಬಲಾರರು. ವಿಷಯಸುಖವು ದೊರೆತಮೇಲೆ ಅದನ್ನು ಬಹುಕಾಲ ಅನುಭವಿಸಬೇಕೆಂಬ ಆಸೆಯು ಬಲವಾಗಬಹುದು. ಅಷ್ಟೇ ಹೊರತು ವಿಷಯಗಳ ಉಪಭೋಗದಿಂದ ಕಾಮವು ಶಾಂತಿಯಾಗುವದೆಂಬ ಆಸೆಯು ಎಂದಿಗೂ ಸಲ್ಲದು. ಹೆಚ್ಚಿನ ಸುಖದ ಆಸೆಯ ಮಾತಂತೂ ಬರಿಯ ಹಗಲು ಕನವರಿಕೆಯೇ ಸರಿ.

ಹಾಗಾದರೆ ವಿಷಯಗಳು ನಿಸ್ಸಾರವೆಂಬ ನಿಶ್ಚಯವು ಹೇಗೆ ಆಗಬೇಕು ಎಂಬ ಪ್ರಶ್ನೆಯು ಎದ್ದುಕೊಳ್ಳುವದಷ್ಟೆ ? ಇದಕ್ಕೆ ಒಂದೇ ಒಂದು ಉಪಾಯವಿರುವದು. ಅದು ಯಾವದೆಂದರೆ ಪುಣ್ಯಕರ್ಮಗಳ ಆಚರಣೆ. ಪುಣ್ಯಕರ್ಮಗಳು ಎರಡು ಬಗೆ. ಒಂದುಜಾತಿಯ ಕರ್ಮಗಳಿಗೆ ಕಾಮ್ಯಕರ್ಮಗಳೆಂದೂ ಇನ್ನೊಂದು ಜಾತಿಯ ಕರ್ಮಗಳಿಗೆ ನಿತ್ಯಕರ್ಮಗಳೆಂದೂ ಹೆಸರು. ಇವುಗಳಲ್ಲಿ ನಿತ್ಯಕರ್ಮಗಳ ಆಚರಣೆಯೇ ಸರಿಯಾದ ಜ್ಞಾನಕ್ಕೆ ಸಾಧನವೆಂದು ಭರತಖಂಡದ ಮಹರ್ಷಿಗಳು ಕಂಡುಹಿಡಿದಿರುತ್ತಾರೆ.

ಈ ಅಭಿಪ್ರಾಯವನ್ನು ಸ್ವಲ್ಪ ವಿವರಿಸುವದು ಅವಶ್ಯವಾಗಿದೆ. ಏಕೆಂದರೆ ಕರ್ಮವೆಂದರೆ ಕೆಲಸವು. ಶರೀರ, ಇಂದ್ರಿಯ, ಮನಸ್ಸು ಇವುಗಳ ವ್ಯಾಪಾರವೆಲ್ಲ ಕೆಲಸವೇ ಆಗಿರುವದರಿಂದ ನಾವು ಏನೇನು ಯೋಚಿಸಿಕೊಂಡರೂ ಏನೇನು ಮಾತಾಡಿದರೂ ಏನೇನು ವ್ಯಾಪಾರವನ್ನು ಕೈಕಾಲು ಮುಂತಾದವುಗಳಿಂದ ಮಾಡಿದರೂ ಅದೆಲ್ಲವೂ ಒಂದರ್ಥದಲ್ಲಿ ಕರ್ಮವೇ ಆಗಿರುತ್ತದೆ. ಆದರೂ ನಾವು ನಮ್ಮ ಸಾಮಾನ್ಯತಿಳಿವಳಿಕೆಯಿಂದ ಮಾಡುವ ಕರ್ಮಗಳೇ ಅಲ್ಲದೆ

ಶಾಸ್ತ್ರದಲ್ಲಿ ಹೇಳಿರುವ ಕೆಲವು ಕರ್ಮಗಳೂ ಉಂಟು. ಆ ಕರ್ಮಗಳೂ ಶರೀರಾದಿಗಳ ವ್ಯಾಪಾರವೇ ಆದರೂ ಅವುಗಳಲ್ಲಿ ಒಂದು ವಿಶೇಷವುಂಟು. ಅದೇನೆಂದರೆ ಅವುಗಳಲ್ಲಿ ತೊಡಗಿರುವವರಿಗೆ ಈ ಜನ್ಮವೇ ಅಲ್ಲದೆ ಬೇರೆ ಜನ್ಮಗಳೂ ಉಂಟೆಂತಲೂ ಈ ನಮ್ಮ ಲೋಕವೇ ಅಲ್ಲದೆ ಬೇರೆ ಲೋಕಗಳೂ ಉಂಟೆಂತಲೂ ಆ ಜನ್ಮಗಳಲ್ಲಿ ಮತ್ತು ಆ ಲೋಕಗಳಲ್ಲಿ ನಾವು ಈಗ ಮಾಡುವ ಕರ್ಮಗಳ ಫಲವನ್ನು ಅನುಭವಿಸಬೇಕಾಗಿರುವದೆಂತಲೂ ನಂಬಿಕೆಯುಂಟಾಗಿರುವದು. ಇಂದು ಮಾಡಿದ್ದು ಇಂದಿಗೇ ತೀರಿತು, ಒಂದು ಕರ್ಮವನ್ನು ಮಾಡಿದರೆ ಕೂಡಲೆ ಅದರ ಫಲವು ಆಗದೆ ಇದ್ದರೆ, ಮುಂದೆ ಅದರ ಫಲವು ಮತ್ತೊಮ್ಮೆ ಮತ್ತೆಲ್ಲಿಯಾದರೂ ನಮ್ಮನ್ನು ಎದುರಿಸುವದೆಂಬುದು ಸುಳ್ಳು - ಎಂಬ ತಿಳಿವಳಿಕೆಯು ಅಂಥವರಿಗೆ ಇರುವದಿಲ್ಲ. ಶಾಸ್ತ್ರದಲ್ಲಿ ಹೇಳಿರುವ ಧರ್ಮಗಳೆಲ್ಲವೂ ಯಾವಾಗಲೂ ಹೀಗೆ ಲೋಕಾಂತರದಲ್ಲಿ ಜನ್ಮಾಂತರದಲ್ಲಿ ಅನುಭವಿಸಬೇಕಾದ ಫಲವನ್ನು ಕೊಡುವವುಗಳೇ ಆಗಿರುವವೆಂದು ಊಹಿಸಬಾರದು. ಏಕೆಂದರೆ ಬೇರೊಂದು ಜನ್ಮದಲ್ಲಿ ನಾನು ಐಶ್ವರ್ಯವಂತನಾಗಿ ಹುಟ್ಟಬೇಕು, ಶ್ರೋತ್ರಿಯನಾಗಿ ಹುಟ್ಟಬೇಕು, ಸ್ವರ್ಗದ ಇಂದ್ರಾದಿಗಳ ಭೋಗವನ್ನು ಪಡೆಯುವನಾಗಬೇಕು - ಎಂದು ಮುಂತಾದ ಅಭಿಲಾಷೆಯಿಂದ ಮಾಡುವ ಶಾಸ್ತ್ರೀಯಕರ್ಮಗಳಿಗೆ ಕಾಮ್ಯಕರ್ಮಗಳೆಂದು ಹೆಸರು. ಕಾಮ್ಯಕರ್ಮವೆಂದರೆ ಫಲದ ಆಸೆಯಿಂದ ಮಾಡುವ ಕರ್ಮಗಳು. ಆಸೆಯೆಲ್ಲವೂ ಪರಲೋಕಕ್ಕೇ ಜನ್ಮಾಂತರಕ್ಕೇ ಸಂಭವಿಸಿರುವದೆಂಬ ನಿಯಮವಿಲ್ಲವಾದ್ದರಿಂದ ಕೆಲವು ಕಾಮ್ಯಕರ್ಮಗಳಿಗೆ ಈ ಜನ್ಮದಲ್ಲಿಯೇ ಆಗಬೇಕಾದ ಫಲವೂ ಇರಬಹುದು. ಉದಾಹರಣೆಗೆ : ನನಗೆ ಗಂಡುಮಕ್ಕಳಾಗಬೇಕು, ಆರೋಗ್ಯ ಸಿಕ್ಕಬೇಕು, ಬ್ರಹ್ಮಚರ್ಯದ ತೇಜಸ್ಸು ಉಂಟಾಗಬೇಕು, ಪಶುಗಳ ವೃದ್ಧಿಯಾಗಬೇಕು - ಎಂಬುದೇ ಮುಂತಾದ ಆಸೆಗಳಿಂದ ಮಾಡುವ ಶಾಸ್ತ್ರೀಯ ಕರ್ಮಗಳು ಈ ಜಾತಿಯ ಕಾಮ್ಯಕರ್ಮಗಳಾಗಿರುತ್ತವೆ. ಆರೋಗ್ಯವೇ ಮುಂತಾದವುಗಳಿಗಾಗಿ ನಾವು ವೈದ್ಯಶಾಸ್ತ್ರವೇ ಮುಂತಾದವುಗಳ ತಿಳಿವಳಿಕೆಯಿಂದ ಕೆಲವು ನಿಯಮಗಳನ್ನು ಪಾಲಿಸುವೆವಷ್ಟೆ. ಆ ಬಗೆಯ ಲೌಕಿಕಕರ್ಮಗಳನ್ನು ಮಾಡಿದಮೇಲೂ ನಮಗೆ ಉದ್ದಿಷ್ಟಫಲವು ದೊರೆಯದೆ ಹೋಗಬಹುದು.

ಅಂಥ ಸಂದರ್ಭದಲ್ಲಿ ನಮಗೆ ಇಂಥಿಂಥ ಫಲಗಳು ದೊರೆಯುವದಕ್ಕೆ ಯಾವದೋ ಒಂದು ಅದೃಷ್ಟವಾದ ಅಡ್ಡಿಯಿರಬೇಕು - ಎಂಬ ಭಾವನೆಯಿಂದ ಶಾಸ್ತ್ರೀಯಕರ್ಮಗಳನ್ನು ಕೆಲವರು ಮಾಡಬಹುದು. ಇದೂ ಅಲ್ಲದೆ ದೃಷ್ಟವಾದ ಉಪಾಯಗಳಿಂದ ಆರೋಗ್ಯ, ಪುತ್ರಸಂತಾನ - ಮುಂತಾದವುಗಳನ್ನು ಪಡೆದರೂ ಶರೀರದ ಸಂಸ್ಕಾರವೂ ಸಂತಾನಶುದ್ಧಿಯೂ ಅಲೌಕಿಕಫಲವುಳ್ಳ ಶಾಸ್ತ್ರೀಯ ಕರ್ಮಗಳಿಂದಲೇ ಉಂಟಾಗುವವೆಂದು ಹಿರಿಯರು ಹೇಳುತ್ತಾರೆ. ಅವರ ವಚನದಲ್ಲಿಯೂ ಶಾಸ್ತ್ರವಚನದಲ್ಲಿಯೂ ನಂಬಿಕೆಯಿರುವವರು ಅಂಥ ಅಲೌಕಿಕ ಫಲವೂ ತಮಗೆ ಬೇಕೆಂದು ಹವಣಿಸುವದು ಸ್ವಾಭಾವಿಕವಾಗಿದೆ. ಎಷ್ಟೋ ಕರ್ಮಗಳಿಗೂ ಅವುಗಳಿಂದಾಗುವ ಫಲಗಳಿಗೂ ಇರುವ ಸಂಬಂಧವು ಸಾಮಾನ್ಯ ರಿಗೆ ತಿಳಿಯುವದಿಲ್ಲ ; ಏಕೆಂದರೆ ಆ ಸಂಬಂಧವು ಪ್ರತ್ಯಕ್ಷಾದಿ ಗೋಚರವಲ್ಲವೇ ಅಲ್ಲ. ಆದರೆ ಶಾಸ್ತ್ರೋಕ್ತರೀತಿಯಿಂದ ಇಂಥ ಕರ್ಮಗಳನ್ನು ಮಾಡಿದರೆ ಇಂಥ ಫಲವುಂಟಾಗುವದೆಂದು ನಂಬುವದಕ್ಕೆ ಶ್ರದ್ಧೆಯೇ ಕಾರಣವಲ್ಲದೆ ಪ್ರತ್ಯಕ್ಷಾದಿ ಗಳಲ್ಲವಾದ್ದರಿಂದ ಇಂಥ ವಿಷಯಗಳಿಗೆ ತರ್ಕವನ್ನು ತಗಲಿಸಿನೋಡುವದು ಸರಿಯಲ್ಲ. ಯಾರು ಶಾಸ್ತ್ರಗಳು ಹೇಳುವದನ್ನು ನಂಬಿ ಕರ್ಮವನ್ನು ಮಾಡುವರೋ ಅವರೇ ಆ ಬಗೆಯ ಕರ್ಮಗಳಿಗೆ ಅಧಿಕಾರಿಗಳಾಗಿರುತ್ತಾರೆ. ಲೋಕದಲ್ಲಿ ಜನರು ಮಾಡುವ ಕೆಲಸಗಳೆಲ್ಲ ಅವರವರ ಶ್ರದ್ಧೆಯನ್ನೇ ಅನುಸರಿಸಿರುವದರಿಂದ ಯಾರಿಗೆ ಎಂಥ ಶ್ರದ್ಧೆಯಿರುವದೋ ಅದಕ್ಕನುಗುಣ ವಾದ ಕೆಲಸಗಳನ್ನು ಅವರು ಆರಂಭಿಸುವರೆನ್ನುವದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಇದಂತಿರಲಿ, ಮುಖ್ಯವಾಗಿ ಕಾಮ್ಯಕರ್ಮಗಳಿಂದ ಕೆಲವು ಗೊತ್ತಾದ ಫಲಗಳೇ ಆಗಬೇಕೆಂದು ಉದ್ದೇಶವಿರುವದರಿಂದ ಪ್ರಾಪಂಚಿಕರ ಮಿಕ್ಕ ಕರ್ಮಗಳಿಗಿಂತ ಈ ಕರ್ಮಗಳು ಅಷ್ಟೇನೂ ಉತ್ಕೃಷ್ಟವಲ್ಲವೆಂದು ಕೆಲವರಿಗೆ ಅನ್ನಿಸಬಹುದು. ಆದರೆ ಈ ಕರ್ಮಗಳಲ್ಲಿ ಒಂದು ಅಲೌಕಿಕವಾದ ಶಕ್ತಿ ವಿಶೇಷವೂ ಉಂಟು. ಅವನ್ನು ಮಾಡುವವರಿಗೆ ಇಹಲೋಕದಲ್ಲಿ ಆಗುವ ಲೌಕಿಕವಾದ ಫಲವಿಶೇಷವೂ ಉಂಟು - ಎಂದು ಈ ಕರ್ಮಗಳನ್ನು ಮಾಡು ವವರಿಗೆ ಅಭಿಪ್ರಾಯವಿರುವದು. ಲೌಕಿಕಕರ್ಮಗಳು ಕೇವಲ ಪ್ರತ್ಯಕ್ಷಫಲ ವನ್ನುದ್ದೇಶಿಸಿ ಮಾಡತಕ್ಕವುಗಳಾದ್ದರಿಂದ ಅವುಗಳಿಗೆ ಲೋಕಾಂತರದಲ್ಲಾಗಲಿ

ಜನ್ಮಾಂತರದಲ್ಲಾಗಲಿ ಉತ್ತಮವಾದ ಫಲವಿಶೇಷವನ್ನು ಕೊಡುವ ಸಾಮರ್ಥ್ಯವಿರುವದಿಲ್ಲ, ಶಾಸ್ತ್ರೀಯಕರ್ಮಗಳಿಗೆ ಉಂಟು. ಇಷ್ಟು ಮಾತ್ರ ಲೌಕಿಕಕರ್ಮಗಳಿಗೂ ಶಾಸ್ತ್ರೀಯಕರ್ಮಗಳಿಗೂ ವೈಲಕ್ಷಣ್ಯವಿರುತ್ತದೆ.

ಇದಂತಿರಲಿ. ಈ ಎರಡು ಬಗೆಯ ಕಾಮ್ಯಕರ್ಮಫಲಗಳಿಗೂ ಕಾಳಸರ್ಪನಿಗೆ ಅಂಜುವಂತೆ ಯಾರು ಅಳುಕುವರೋ ಅಂಥವರಿಗೆ ಶಾಸ್ತ್ರದಲ್ಲಿ ಹೇಳಿರುವ ಮತ್ತೊಂದು ಬಗೆಯ ಪುಣ್ಯಕರ್ಮದಲ್ಲಿ ರುಚಿ ಹತ್ತುವದು. ಇವುಗಳಿಗೆ ನಿತ್ಯಕರ್ಮಗಳೆಂದು ಹೆಸರು. ನಿತ್ಯಕರ್ಮಗಳೆಂದರೆ ಅವನ್ನು ಮಾಡಿದ ಮೇಲೂ ಮತ್ತೆ ಯಾವದೊಂದು ಫಲವನ್ನೂ ಬಯಸದಂಥ ಕರ್ಮಗಳು. ಇವುಗಳನ್ನು ಮಾಡಬೇಕೆಂದು ಶಾಸ್ತ್ರದಲ್ಲಿ ಹೇಳಿದೆಯಾದ್ದರಿಂದ ಅವನ್ನು ಮಾಡುತ್ತೇವೆಯೇ ಹೊರತು ಇಂಥದ್ದೊಂದು ಫಲಕ್ಕೆಂದು ಮಾಡುವದಿಲ್ಲ. ಈ ಕರ್ಮಗಳಲ್ಲಿರುವ ಒಂದು ವಿಶೇಷವೇನೆಂದರೆ ಇವು ನಮ್ಮ ಚಿತ್ತವೃತ್ತಿಯನ್ನು ಚೊಕ್ಕಟಗೊಳಿಸುವವು. ಉದಾಹರಣೆಗೆ : ವೇದದಲ್ಲಿ ವಿಹಿತವಾಗಿರುವ ಸಂಧ್ಯಾವಂದನೆಯಲ್ಲಿ ಪರಮರಹಸ್ಯವಾಗಿರುವ ಗಾಯತ್ರಿಯಲ್ಲಿ ಈ ಮಹಾಫಲದಾಯಕವಾದ ಶಕ್ತಿಯಿರುವದು. ಗಾಯತ್ರಿಯ ಅರ್ಥದ ಸಾರವೇನೆಂದರೆ, "ನಮ್ಮ ಬುದ್ಧಿಯನ್ನು ಪ್ರೇರಿಸುವ ದೇವನ ತೇಜಸ್ಸನ್ನು ಕುರಿತು ಧ್ಯಾನಮಾಡುತ್ತೇವೆ". ವಿಷಯಗಳ ಧ್ಯಾನವೇ ಕತ್ತಲು, ಅದರ ಬದಲು ನಿತ್ಯಕರ್ಮಗಳನ್ನು ಅನುಷ್ಠಾನಮಾಡುವದೆಂಬುದು ಗಜಬೆಳಕು. ನಾವೂ ಸಂಧ್ಯಾವಂದನೆಯನ್ನು ಮಾಡಿದೆವೆಂದು ಕಾಟಕ್ಕೆ ಮಾಡಿದಂತೆ ನಟಿಸುವವರಿಗೆ ಸರ್ವವ್ಯಾಪಕವಾದ ಪರಮೇಶ್ವರಚೈತನ್ಯದ ಬೆಳಕಿನ ಧ್ಯಾನವು ದೊರೆಯಲಾರದು. ದ್ವಿಜರಾದವರು ಪ್ರತಿನಿತ್ಯವೂ ಬೆಳಗ್ಗೆ ಸೂರ್ಯೋದಯವಾಗುವ ಮುಂಚೆಯೇ ಮೈಯಲ್ಲಿ ಶುಚಿಯಾಗಿ ಮಡಿಯ ಬಟ್ಟೆಗಳನ್ನುಟ್ಟುಕೊಂಡು ಮನಸ್ಸಿನಲ್ಲಿ ಪರಿಶುದ್ಧವಾದ ಈ ದೇವಧ್ಯಾನವನ್ನು ಮಾಡಬೇಕು. ಸಾಯಂಕಾಲ ಸೂರ್ಯಾಸ್ತವಾಗುವದರೊಳಗೆ ಮತ್ತೊಂದು ಸಲ ಈ ಧ್ಯಾನವನ್ನು ತಪ್ಪದೆ ಮಾಡಬೇಕು. ದ್ವಿಜರಲ್ಲದವರೂ ಬೆಳಗ್ಗೆ ಸಾಯಂಕಾಲ - ಈ ಎರಡೂ ಹೊತ್ತೂ ತಮ್ಮತಮ್ಮ ಕೈಯಲ್ಲಾದಮಟ್ಟಿಗೂ ಮಡಿಯಾಗಿ ಪರಮೇಶ್ವರನ ಧ್ಯಾನವನ್ನು ಮಾಡಬೇಕು. ಆಕಾಶದಲ್ಲಿ ಬೆಳಗುವ ಸೂರ್ಯಮಂಡಲವನ್ನು ಪರಮೇಶ್ವರನ ತೇಜೋ

ಮಂಡಲದ ಹೆಗ್ಗುರುತೆಂದು ಭಾವಿಸಿ ಶುದ್ಧವಾದ ಮನಸ್ಸಿನಿಂದ ''ಸರ್ವತ್ರ ಪಸರಿಸಿರುವ ಚೈತನ್ಯಪ್ರಕಾಶನೆ, ನಮ್ಮನ್ನು ವಿಷಯಚಿಂತನೆಯ ಕತ್ತಲಿನಿಂದ ಹೊರಕ್ಕೆ ತಂದು ನಿನ್ನ ಸ್ವರೂಪದ ಚಿಂತನೆಯನ್ನು ಮಾಡುವಂತೆ ಮಾಡು ; ನಮಗೆ ದುಷ್ಟವಾಸನೆಗಳನ್ನು ಹತ್ತಿಸಿಕೊಳ್ಳುವ ದುಷ್ಟವಿಚಾರಗಳನ್ನಾಗಲಿ ದುಷ್ಟವ್ಯವಹಾರವನ್ನಾಗಲಿ ಅಪ್ಪುವ ಕೆಟ್ಟಬುದ್ಧಿಯನ್ನು ಕೊಡದಿರು !'' ಎಂದು ಹೃದಯಪೂರ್ವಕವಾಗಿ ಬೇಡಿಕೊಳ್ಳಬೇಕು. ಸಾತ್ವಿಕರಾಗಿ ಭಗವಂತನ ಭಕ್ತರಾಗಿ ಲೋಕಕ್ಕೆ ಕಲ್ಯಾಣವನ್ನೇ ಬಯಸುವವರಾಗಿರುವ ಸಾಧುಪುರುಷರಿಗೆ ನಮಸ್ಕಾರವನ್ನು ಮಾಡಿ ಅವರ ಆಶೀರ್ವಾದವನ್ನು ಕೈಗೊಳ್ಳಬೇಕು. ಸಮಯ ಸಿಕ್ಕಿದಾಗ ಅವರ ಸೇವೆಯನ್ನು ಮಾಡಿ ಅವರ ಮನಸ್ಸನ್ನು ಒಲಿಸಿಕೊಂಡು ಪರಮಾರ್ಥವಿಚಾರವನ್ನು ಮಾಡಬೇಕು. ಸ್ವಾರ್ಥಬುದ್ಧಿಯನ್ನು ಬೆಳೆಯಿಸುವ, ವಿಷಯಗಳ ಅಭಿಲಾಷೆಯಿಂದ ಕಾಮಕ್ರೋಧಗಳನ್ನು ಹಿಗ್ಗಿಸುವ ವ್ಯವಹಾರ ಗಳನ್ನು ಆದಷ್ಟು ಕಡಿಮೆಮಾಡಿಕೊಳ್ಳಬೇಕು. ತಮ್ಮತಮ್ಮ ವರ್ಣಕ್ಕೂ ಆಶ್ರಮಕ್ಕೂ ಗೊತ್ತಾಗಿರುವ ಕರ್ಮಗಳನ್ನು ನೆರವೇರಿಸುವವರೆಲ್ಲರಿಗೂ ಬುದ್ಧಿಯಲ್ಲಿ ಹೊಳಪು ಹುಟ್ಟುವದು. ತಾನು ಮಾಡುವ ಕರ್ಮಗಳನ್ನು ಭಗವಂತನಿಗೆ ಅರ್ಪಣೆಮಾಡುವವರೆಲ್ಲರಿಗೂ ಹಮ್ಮು ಕಡಿಮೆಯಾಗುವದು. ಹೃದಯವು ಪ್ರೇಮದಿಂದ ಹಿಗ್ಗುವದು, ಆ ದೇವದೇವನ ಧ್ಯಾನವು ದಕ್ಕುವದು. ಇಲ್ಲಿರುವ ರಹಸ್ಯವೇನೆಂದರೆ ಮುಖ್ಯವಾಗಿ ದಾನ, ಧರ್ಮ, ಪರೋಪಕಾರ - ಮುಂತಾದವುಗಳನ್ನು ಯಾವದೊಂದು ಪ್ರತಿಫಲವನ್ನೂ ಬಯಸದೆಯೇ ಮಾಡುವ ಆನಂದವನ್ನು ಯಾರು ಯಾರು ಪಡೆದುಕೊಂಡಿರುವರೋ ಅವರೆಲ್ಲರಿಗೂ ನಿತ್ಯಕರ್ಮಗಳಿಂದಾಗಬೇಕಾದ ಪೂರ್ಣಫಲವು ದೊರಕಿರುವ ದೆಂದು ತಿಳಿಯಬೇಕು. ನಿತ್ಯಕರ್ಮಕ್ಕೆ ಆಗಬೇಕಾದ ಫಲವೆಲ್ಲ ಚಿತ್ತಶುದ್ಧಿ ; ಈ ಚಿತ್ತಶುದ್ಧಿಯಾಯಿತೋ ಇಲ್ಲವೋ ವಿಷಯಗಳ ನಿಜವಾದ ಸ್ವರೂಪವು ಎಳ್ಳಷ್ಟೂ ಸಂಶಯವಿಲ್ಲದಂತೆ ಮನಗಾಣುವದು.

ಚಿತ್ತಶುದ್ಧಿಯಿಂದ ಯಾವ ವಸ್ತುವನ್ನು ವಿಚಾರಮಾಡಿದರೂ ಇದ್ದದ್ದು ಇದ್ದಂತೆಯೇ ತೋರಹತ್ತುತ್ತದೆ. ಹೀಗಿರುವದರಿಂದ ಸರಿಯಾದ ನಿತ್ಯಕರ್ಮ ಗಳನ್ನು ಮಾಡಿ ಯಾರಿಗೆ ಚಿತ್ತವು ಸ್ವಚ್ಛವಾಗಿರುವದೋ ಅವರಿಗೆ ವಿಷಯದ

ಪೂರ್ಣಜ್ಞಾನವಾಗುವದು. ನಾವು ಹೊರಗೆ ನೋಡುವ ಪದಾರ್ಥಗಳಲ್ಲದೆ ನಮ್ಮ ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ - ಇವೆಲ್ಲವೂ ವಿಷಯವೇ ಹೊರತು ನಮ್ಮ ಸ್ವರೂಪವಲ್ಲವೆಂಬುದು ಇಂಥವರಿಗೆ ಸ್ಪಷ್ಟವಾಗಿ ತಿಳಿಯುವದು. ದೇಹವೇ ಮುಂತಾದವುಗಳು ತಾವೆಂದು ಯಾರು ಭಾವಿಸಿರುವರೋ ಅವರಿಗೆ ಹೆಂಡಿರು, ಮಕ್ಕಳು, ಹೊಲ, ಮನೆ, ಹಣಕಾಸು - ಮುಂತಾದ ಈ ಲೋಕದ ಸುಖಗಳೂ ಸ್ವರ್ಗವೇ ಮುಂತಾದ ಪರಲೋಕದ ಸುಖಗಳೂ ಬೇಕೆಂಬ ಕಳ್ಳಬಾಯಾರಿಕೆಯುಂಟಾಗುವದು. ವಿಷಯಗಳಲ್ಲಿರುವ ಬಗೆಬಗೆಯ ದೋಷಗಳು ಯಾವವೂ ಅವರ ಮನಸ್ಸಿಗೆ ಹೊಳೆಯುವದಿಲ್ಲ. ಆದರೆ ಈ ದೇಹಾದಿಗಳು ತಾವಲ್ಲವೆಂದೂ ಅವುಗಳಿಗಾಗಿ ಬಾಹ್ಯವಸ್ತುಗಳನ್ನು ಸುಮ್ಮನೆ ಬಯಸುತ್ತಾ ಹೋಗುವದು ಅವಿವೇಕವೆಂದೂ ಯಾರಿಗೆ ಗೊತ್ತಾಗುವದೋ ಅವರಿಗೆ ಪೂರ್ಣಶಾಂತಿಯು ಸಿಕ್ಕುವದು. ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ - ಇವೆಲ್ಲಕ್ಕೂ ಸಾಕ್ಷಿಯಾಗಿರುವ ಆತ್ಮನೇ ತಾವೆಂದು ತಿಳಿದುಕೊಂಡಿರುವವರಿಗೆ ತಮ್ಮ ಸ್ವರೂಪವು ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳದ್ದೆಂದೂ ನಿತ್ಯಾನಂದ ಸ್ವರೂಪವಾಗಿರುವದೆಂದೂ ನಿರ್ವಿಘ್ನವಾಗಿ ಗೊತ್ತಾಗುವದು. ಹೀಗೆ ಇದು ತಾನು, ಇದು ತಾನಲ್ಲ - ಎಂಬುದನ್ನು ಬೇರ್ಪಡಿಸಿ ತಿಳಿಯುವ ಜ್ಞಾನಕ್ಕೆ **ಆತ್ಮಾನಾತ್ಮವಿವೇಕ**ವೆಂದು ಹೆಸರು. ಈ ವಿವೇಕವೇ ಶಾಂತಿದಾಯಕವಾದದ್ದೇ ಹೊರತು ವಿಷಯೇಚ್ಛೆಯಲ್ಲ. ವಿವೇಕಿಗಳಾದವರು ಇಂಥ ಶಾಂತಿಯು ತಮಗೂ ತಮ್ಮ ನೆರೆಯವರಿಗೂ ದೊರೆಯಲೆಂದು ಹವಣಿಸುತ್ತಿರುವರೇ ಹೊರತು ವಿಷಯಗಳನ್ನು ರಾಶಿಹಾಕಿಕೊಳ್ಳುವದಕ್ಕೆ ಪ್ರಯಾಸಪಡುತ್ತಿರುವದಿಲ್ಲ.

☆☆☆☆

## ೭. ಉಪಸಂಹಾರ

ಈ ಪ್ರಕರಣದಲ್ಲಿ ಹೇಳಿರುವ ವಿಷಯಗಳನ್ನು ಇಲ್ಲಿ ಸಂಕ್ಷೇಪವಾಗಿ ಮತ್ತೊಮ್ಮೆ ತಿಳಿಸುವೆವು. ವಿಚಾರದ ಒಟ್ಟು ಫಲಿತಾಂಶವು ಇದರಿಂದ ಮನಸ್ಸಿಗೆ ಚೆನ್ನಾಗಿ ಹಿಡಿಯುವದಕ್ಕೆ ಅನುಕೂಲವಾಗುವದು.

ಮನುಷ್ಯರಿಗೆ ಬಗೆಬಗೆಯಾದ ಕೋರಿಕೆಗಳು ಹಲವು ಇರುವಂತೆ ತೋರಿದರೂ ನಮ್ಮೊಳಗೆ ಕೋರಿಕೆಗಳು ಉಂಟಾಗುವ ಬಗೆಯನ್ನು ಸೂಕ್ಷ್ಮದೃಷ್ಟಿಯಿಂದ ವಿಚಾರಮಾಡಿದರೆ ಎಲ್ಲಾ ಕೋರಿಕೆಗಳಿಗೂ ನಿತ್ಯವಾಗಿಯೂ ನಿರತಿಶಯವಾಗಿಯೂ ಇರುವ ಆನಂದದ ಕಡೆಗೇ ಕಣ್ಣಿರುವದೆಂಬುದು ವ್ಯಕ್ತವಾಗುವದು. ಮನುಷ್ಯರೆಲ್ಲರೂ ತಿಳಿದೋ ತಿಳಿಯದೆಯೋ ಎಲ್ಲಾ ಬಗೆಯ ದುಃಖವನ್ನೂ ನೀಗಿಕೊಂಡು ಶಾಶ್ವತವಾಗಿಯೂ ಎಲ್ಲಕ್ಕೂ ಮಿಗಿಲಾಗಿಯೂ ಇರುವ ಸುಖವನ್ನು ಪಡೆಯಬೇಕೆಂದೇ ಹಾರೈಸುತ್ತಿರುವರು. ಈ ರಹಸ್ಯವನ್ನು ಅರಿತುಕೊಂಡು ಇಂಥ ಆನಂದಕ್ಕಾಗಿಯೇ ಪ್ರಯತ್ನಮಾಡುತ್ತಿರುವರು. ಕೆಲವರುಂಟು. ಈ ಆನಂದವನ್ನು ಕಂಡುಕೊಂಡರೆ ಎಲ್ಲ ಕೋರಿಕೆಗಳೂ ನೆರವೇರಿದಂತೆ ಎಂಬಿದನ್ನು ಆ ಮಹನೀಯರು ಮಾತ್ರವೇ ಅರಿತಿರುವರು. ಅವರಿಗೆ **ಮುಮುಕ್ಷು**ಗಳು ಎಂದು ಹೆಸರು.

ಕೋರಿಕೆಗಳು ತೋರಿತೋರಿದಂತೆ ಅವುಗಳು ಬೇಕೆನ್ನುವ ವಿಷಯಗಳನ್ನು ಬೆನ್ನಟ್ಟುವವರಿಗೆ ವಿಷಯಿಗಳೆಂದು ಹೆಸರು. ಈ ವಿಷಯಿಗಳಿಗೆ ಸುಖವೇನೋ ಬೇಕು ; ಆದರೂ ದುಃಖಕ್ಕೊಯ್ಯುವ ಹಾದಿಗಳಲ್ಲಿಯೇ ನಡೆಯುವದನ್ನು ಮಾತ್ರ ಬಿಡುವದಿಲ್ಲ. ವಿಷಯಿಗಳು ಹೀಗೆ ಯಾವಾಗಲೂ ಅನುಸರಿಸುತ್ತಿರುವ ತಪ್ಪು ಹಾದಿಗಳಿಗೆ **ಅರಿಷಡ್ವರ್ಗ**ವೆಂದು ಹೆಸರು. ಆಸೆ, ಸಿಟ್ಟು, ಜಿಪುಣತನ, ಮೋಹ, ಮದ, ಹೊಟ್ಟೆಕಿಚ್ಚು - ಇವುಗಳ ಗುಂಪಿಗೇ **ಅರಿಷಡ್ವರ್ಗ**ವೆಂದು ಹೆಸರು. ಇವುಗಳು ನಿಜವಾಗಿ ಮನುಷ್ಯನಿಗೆ ಅಹಿತವನ್ನುಂಟುಮಾಡುವದನ್ನೇ ಉತ್ತಮವೆಂದು ತೋರಿಸುತ್ತಾ ಇರುವದರಿಂದ ನಿಜವಾಗಿ ಅವನ ಶತ್ರುಗಳೇ ಆಗಿರುತ್ತವೆ. ಆದ್ದರಿಂದ ಇದನ್ನು "ಅರಿ" ಗಳೆಂದು ಕರೆದಿರುವದು ಸರಿಯಾಗಿರುತ್ತದೆ. ಆದರೂ ಯಾರು ಇವುಗಳಿಗೆ ಆಶ್ರಯವನ್ನು ಕೊಟ್ಟಿರುವರೋ ಅವರಿಗೆ ಇವು

ಬಲು ಮೆಚ್ಚಾಗಿರುವವು. ದುರ್ಯೋಧನನಿಗೆ ಕೆಟ್ಟ ದಾರಿಯನ್ನೇ ತೋರಿಸಿ ಅವನ ವಿಶ್ವಾಸಕ್ಕೆ ಪಾತ್ರನೆನಿಸಿದ್ದ ಶಕುನಿಯಂತೆ ಇವು ವಿಷಯಿಗಳ ವಿಶ್ವಾಸಕ್ಕೆ ಪಾತ್ರವಾಗಿಯೇ ಅವರನ್ನು ಮಾಡಬಾರದ ಕೆಲಸಗಳನ್ನು ಮಾಡಿ ಪಡಬಾರದ ಕಷ್ಟಗಳನ್ನನುಭವಿಸುವಂತೆ ಪ್ರೇರಿಸುತ್ತಿರುವವು. ಕಾಮ, ಕ್ರೋಧ - ಮುಂತಾದ ಆರೂ ಮುಖ್ಯವಾಗಿ ಎರಡೇ ದೊಡ್ಡ ಕವಲುದಾರಿಗಳಿಂದ ಒಡೆದ ಸೀಳು ಹಾದಿಗಳಾಗಿರುತ್ತವೆ. ಅಹಂಕಾರ, ಮಮಕಾರ - ಇವೇ ಆ ಎರಡು ಕವಲು ದಾರಿಗಳು. ಎಲ್ಲದಕ್ಕೂ ನಾನು, ನಾನು - ಎಂದು ಹೆಮ್ಮೆಪಡುವದೇ ಮೊದಲನೆಯ ಕವಲುದಾರಿ. ಇದನ್ನೇ ಶಾಸ್ತ್ರಕಾರರು **ಅಹಂಕಾರ**ವೆಂದು ಕರೆಯುತ್ತಾರೆ. ಯಾವದನ್ನೇ ಆಗಲಿ ನನ್ನದು, ನನ್ನದು - ಎಂದು ಬಯಲು ಅಭಿಮಾನವನ್ನು ಹತ್ತಿಸಿಕೊಳ್ಳುವದೇ ಎರಡನೆಯ ಕವಲುದಾರಿ. ಇದನ್ನೇ ತಿಳಿದವರು **ಮಮಕಾರ**ವೆನ್ನುತ್ತಾರೆ. ಈ ಅಹಂಕಾರಮಮಕಾರಗಳಿಂದ ಒಡೆದ ಸೀಳುಹಾದಿಗಳಾದ ಕಾಮಾದಿಗಳನ್ನು ಅನುಸರಿಸಿ ಮುನ್ನಡೆಯುತ್ತ ನಡೆಯುತ್ತ ಈ ವಿಷಯಿಗಳು ದುಃಖಗಳೆಂಬ ಗುಂಡಿಗೊಟರುಗಳಲ್ಲಿ ಮತ್ತೆ ಮತ್ತೆ ಬೀಳುತ್ತಿರುವರು.

ಮುಮುಕ್ಷುಗಳು ನಡೆಯುವದೂ ವಿಷಯಿಗಳು ನಡೆಯುವದೂ ಒಂದೇ ದಾರಿ ; ಅವರಿಬ್ಬರೂ ಸುಖಕ್ಕಾಗಿಯೇ ಪ್ರವರ್ತಿಸುತ್ತಿರುವರು. ಆದರೂ ಮುಮುಕ್ಷುಗಳು ತಪ್ಪುಹಾದಿಗೆ ಹೋಗದಂತೆ ದಾರಿಯಲ್ಲಿ ನಡುನಡುವೆ ಕಂಡುಬರುವ ಕೈಕಂಬಗಳನ್ನು ನೋಡಿಕೊಂಡು ನಡೆಯುವದರಿಂದ ಅವರಿಗೆ ಸೀಳುಹಾದಿಗಳನ್ನು ಹಿಡಿದು ಸಂಕಟಪಡುವ ಅಪಾಯವಿಲ್ಲ. ಮುಮುಕ್ಷುಗಳು ನೋಡಿಕೊಂಡಿರುವ ಸಾಧನಗಳಿಗೆ **ಶಮಾದಿಷಟ್ಕ**ವೆಂದು ಹೆಸರು. ಅದೇ ದಾರಿಯಲ್ಲಿ ನಡೆಯುತ್ತಿದ್ದರೂ ವಿಷಯಿಗಳಿಗೆ ಈ ಶಮದಮಾದಿಗಳು ಸಿಕ್ಕುವದಿಲ್ಲ ; ಕಾರಣವೇನೆಂದರೆ ಮುಮುಕ್ಷುಗಳ ಮನಸ್ಸು ನಿರ್ಮಲವಾಗಿರುವಂತೆ ಅವರ ಮನಸ್ಸು ನಿರ್ಮಲವಾಗಿರುವದಿಲ್ಲ. ವಿಷಯಿಗಳಿಗೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ - ಇವುಗಳ ನೆರವಿಲ್ಲದೆ ದಾರಿ ಸಾಗುವದೇ ಇಲ್ಲ ; ಮುಮುಕ್ಷುಗಳಿಗೆ ಶಮ, ದಮ, ತಿತಿಕ್ಷೆ, ಉಪರತಿ, ಸಮಾಧಾನ, ಶ್ರದ್ಧೆ - ಇವುಗಳಿಲ್ಲದೆ ದಾರಿ ಸಾಗುವದಿಲ್ಲ. ಮನಸ್ಸು

ಕಲ್ಮಷವಾಗಿರುವವರಿಗೆ ಕಾಮಾದಿಗಳಿಂದ ಮತ್ತೆಮತ್ತೆ ಅಶುದ್ಧಿಯೇ ಹೆಚ್ಚು ತ್ತದೆ ; ಮನಸ್ಸು ಶುದ್ಧವಾಗಿರುವವರಿಗೆ ಶಮದಮಾದಿಗಳಿಂದ ಮತ್ತೆ ಮತ್ತೆ ಶುದ್ಧಿಯೇ ಹೆಚ್ಚುತ್ತದೆ.

ಮನಸ್ಸು ಶುದ್ಧಿಯಾಗುವದಕ್ಕೆ **ಪುಣ್ಯಕರ್ಮ**ಗಳನ್ನು ಮಾಡಿಕೊಂಡಿರ ಬೇಕು. ಈ ಲೋಕದ ಮತ್ತು ಪರಲೋಕದ ಸುಖಾಭಾಸಗಳಿಗೆ ಮನಸ್ಸು ಜೋಲುಬೀಳದೆ ನಿಜವಾದ ಆನಂದವೇ ತಮಗೆ ಬೇಕೆಂದು ಯಾರು ಹಿರಿದಾದ ಬಯಕೆಯನ್ನಿಟ್ಟುಕೊಂಡಿರುವರೋ ಅಂಥವರೇ ಚಿತ್ತಶುದ್ಧಿಗಾಗಿ ನಿತ್ಯಕರ್ಮ ಗಳನ್ನು ಮಾಡುವವರು. ವೈರಾಗ್ಯವೇ **ತೃಪ್ತಿಯ ಮರ್ಮ**ವೆಂಬುದನ್ನರಿತಿರುವ ಸಾಧಕರು ನಿತ್ಯಕರ್ಮಗಳಿಂದ ಚಿತ್ತವನ್ನು ಶುದ್ಧಿಗೊಳಿಸಿಕೊಂಡು ವಿಷಯದಾಸೆ ಯೆಂಬ ಕಳ್ಳಬಾಯಾರಿಕೆಯನ್ನು ನೀಗಿಕೊಳ್ಳುವರು. ನಿತ್ಯಕರ್ಮವೆಂದರೆ ಆಯಾ ವರ್ಣಕ್ಕೂ ಆಶ್ರಮಕ್ಕೂ ಅವಶ್ಯವಾಗಿ ಮಾಡಬೇಕೆಂದು ಶಾಸ್ತ್ರದಲ್ಲಿ ವಿಧಿಸಿರುವ ಕರ್ಮಗಳು. ಭಗವಂತನ ಧ್ಯಾನ, ದಾನ, ಪರೋಪಕಾರ - ಮುಂತಾದವು ಗಳೆಲ್ಲವೂ ಈ ಗುಂಪಿಗೇ ಸೇರಿದವುಗಳು. ತಾನು ಮಾಡುವ ಪುಣ್ಯಕರ್ಮಕ್ಕೆ ಪ್ರತಿಯಾಗಿ ಫಲವನ್ನು ಕೋರದೆ, ನಾನು ಇಂಥ ಪುಣ್ಯಕರ್ಮವನ್ನು ಮಾಡುವೆ ನೆಂದು ಹೆಮ್ಮೆಪಡದೆ, ಎಲ್ಲವನ್ನೂ ಭಗವಂತನ ಪ್ರೇರಣೆಯಿಂದ ಆತನು ಅನುಗ್ರಹಿಸಿರುವ ಕರಣಕಳೇಬರಗಳಿಂದ ಮಾಡುತ್ತಿರುವೆನೆಂಬ ಭಾವನೆಯು ಈ ಕರ್ಮಗಳಿಗೆ ಮುಖ್ಯವಾದ ಅಂಗವು. ತನಗೆ ಕೆಟ್ಟದ್ದೆಂದು ತೋರುವದು ಯಾವದನ್ನೂ ಪರರಿಗೆ ಮಾಡದೆ, ಸ್ವಾರ್ಥವನ್ನು ತೊರೆದು ಜನರ ಸೇವೆಯೇ ಜನಾರ್ದನನ ಸೇವೆ ಎಂಬ ಬುದ್ಧಿಯಿಂದ ನಡೆಯುತ್ತಿರುವವನಿಗೆ **ಚಿತ್ತಶುದ್ಧಿ** ಯಾಗುವದು.

ಚಿತ್ತಶುದ್ಧಿಯಾದ ಮಹಾತ್ಮರಿಗೆ ತಮ್ಮ ಸ್ವರೂಪದ ಮತ್ತು ಮಿಕ್ಕ ಎಲ್ಲದ್ದರ ನಿಜವಾದ ಸ್ವರೂಪದ ತಿಳಿವಳಿಕೆಯು ನಿಶ್ಚಿತವಾಗಿ ಉಂಟಾಗುವದು. ಈ ತಿಳಿವಳಿಕೆಗೆ **ಆತ್ಮಾನಾತ್ಮವಿವೇಕ**ವೆಂದು ಹೆಸರು. ಆತ್ಮ ಮತ್ತು ಅನಾತ್ಮ - ಇವುಗಳ ಸ್ವರೂಪವನ್ನು ಬಿಡಿಸಿ ತಿಳಿದುಕೊಳ್ಳುವದಕ್ಕೆ ಪ್ರಯತ್ನಿಸುವ ಮುಮುಕ್ಷು ವಿಗೆ ಅನಾತ್ಮದ ಅಸ್ಥಿರತ್ವವೂ ದುಃಖದಾಯಕತ್ವವೂ ಮನದಟ್ಟಾಗುವದು. ಆದ್ದರಿಂದ ಅವನು ಇನ್ನುಮೇಲೆ ವಿಷಯಗಳ ಬಳಿಗೆ ಹೋಗಿ ಸುಖವನ್ನು

ಕೊಡಿರೆಂದು ಎಂದಿಗೂ ಜೋಳಿಗೆಯನ್ನು ಒಡ್ಡುವದಿಲ್ಲ. ಆತ್ಯಂತಿಕವಾದ ಸುಖವು ಬುದ್ಧಿಯಿಂದ ಹಿಡಿದುಕೊಳ್ಳತಕ್ಕದ್ದೇ ಹೊರತು ಇಂದ್ರಿಯಗಳ ಮೂಲಕವಾಗಿ ಎಂದಿಗೂ ಸಿಗಲಾರದೆಂತಲೂ ವಿಷಯ, ಇಂದ್ರಿಯ - ಇವುಗಳ ಕೂಡುವಿಕೆಯಿಂದ ನಾವು ಪಡೆಯುವೆವೆಂದು ಭಾವಿಸುವ ಸುಖವು ನಿಜವಾಗಿ ಸುಖವೇ ಅಲ್ಲವೆಂತಲೂ ಅದು ದುಃಖದ ಪ್ರತೀಕಾರಮಾತ್ರವೆಂತಲೂ ಇಂಥ ವಿವೇಕಿಗಳಿಗೆ ಮಾತ್ರ ಗೊತ್ತಾಗುವದು. ಈ ರೀತಿಯಲ್ಲಿ ವಿವೇಕವನ್ನು ಪಡೆದವನು ಹೊರಮುಖವಾಗಿ ವಿಷಯಗಳನ್ನರಸುವ ಮಕ್ಕಳಾಟಿಕೆಯನ್ನು ಬಿಟ್ಟು ನಿಜವಾದ ಸುಖವನ್ನು ತನ್ನಲ್ಲಿಯೇ ಕಂಡುಕೊಂಡು ಶಾಂತಿಯನ್ನು ಹೊಂದುವನು.

ಯಾವ ಮಹನೀಯನು ಆತ್ಮನೆಂದರೆ ಇಂಥದ್ದು, ಅನಾತ್ಮವೆಂದರೆ ಇಂಥದ್ದು - ಎಂದು ವಿಂಗಡಿಸಿ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡುವನೋ, ಯಾವ ಮಹನೀಯನು ತನಗೆ ನಿತ್ಯನಿರತಿಶಯವಾದ ಆನಂದವೊಂದೇ ಬೇಕು, ಮಿಕ್ಕ ಪುಟ್ಟ ಸಣ್ಣ ಸುಖಾಭಾಸಗಳು ತನಗೆ ಬೇಕಿಲ್ಲ ಎಂದು ವೈರಾಗ್ಯ ಚಕ್ರವರ್ತಿಯಾಗುವನೋ, ಯಾವ ಮಹನೀಯನು ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ - ಎಂಬ ಆರು ವೈರಿಗಳನ್ನು ಗೆದ್ದು ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ - ಎಂಬ ಆರು ಸಾಧನಗಳ ಸಂಪತ್ತಿಯನ್ನು ಅಳವಡಿಸಿಕೊಂಡಿರುವನೋ, ಯಾವ ಮಹನೀಯನು ಗುರುಶಾಸ್ತ್ರಗಳ ವಚನ ದಲ್ಲಿ ಶ್ರದ್ಧೆಯಿಟ್ಟು ಎಲ್ಲಾ ದುಃಖಗಳ ಬಿಡುಗಡೆಯೂ ಎಲ್ಲಕ್ಕೂ ಹೆಚ್ಚಿನ ಆನಂದದ ಪ್ರಾಪ್ತಿಯೂ ತನಗೆ ಎಂದಿಗೆ ಆದೀತು ! - ಎಂದು ಒಂದೇಸಮನೆ ಹಂಬಲಿಸುತ್ತಿರುವನೋ ಅಂಥ ಮಹನೀಯನೇ ಬ್ರಹ್ಮವಿದ್ಯೆಗೆ ಅಧಿಕಾರಿಯು. ಇಥ **ಸಾಧನಚತುಷ್ಟಯ**ಸಂಪನ್ನನಾದವನೇ ಶಾಸ್ತ್ರಶ್ರವಣವನ್ನು ಮಾಡಿ, ಶ್ರವಣಮಾಡಿದ್ದನ್ನು ಸರಿಯಾದ ಯುಕ್ತಿಗಳಿಗೆ ಹೊಂದಿಸಿನೋಡಿಕೊಂಡು ಅದರ ಪೂರ್ಣಫಲವಾಗಿ ಬ್ರಹ್ಮತತ್ತ್ವವನ್ನು ತನ್ನ ಅನುಭವಕ್ಕೆ ತಂದುಕೊಳ್ಳುವನು. ಅವನೇ ಧನ್ಯನು. ''ಯಾವನು ಬ್ರಹ್ಮವನ್ನು ಅರಿತುಕೊಳ್ಳುವನೋ ಅವನಿಗೇ ಪರಮಗತಿಯುಂಟಾಗುವದು'', ''ಯಾವನು ಈ ಬ್ರಹ್ಮವನ್ನು ಅರಿತುಕೊಳ್ಳು ವನೋ ಅವನು ಬ್ರಹ್ಮಸ್ವರೂಪದಿಂದಲೇ ತನ್ನ ಎಲ್ಲಾ ಕೋರಿಕೆಗಳನ್ನೂ

ಒಂದೇಕಾಲದಲ್ಲಿ ನೆರವೇರಿಸಿಕೊಳ್ಳುವನು'' ಎಂಬ **ಉಪನಿಷತ್ತಿನ ವಚನವು** ಅಂಥ ಮಹನೀಯರಲ್ಲಿಯೇ ಸಾರ್ಥಕವಾಗುವದು.

☆☆☆☆



ನಲ್ಲೂರು ಪಾಂಡುರಂಗ ಎನ್. ರೇವಣ್‌ಕರ್

B.A., LL.B.,

ನಲ್ಲೂರು ವಿಶ್ವಾಸ್ ಜ್ಯೂಯಲರ್ಸ್,

761, ಗಡಿಯಾರ ಕಂಬದ ಹತ್ತಿರ,

ದಾವಣಗೆರೆ - 577 001

ಫೋನ್ : 32746, 29476